# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 13-03-2024ರ ಬುಧವಾರ ಅಪರಾಹ್ನ 3-00 ಗಂಟೆಗೆ ನಡೆದ "ಎರಡನೇ ಸಾಮಾನ್ಯ ಸಿಂಡಿಕೇಟ್ ಸಭೆ"ಯ ನಡಾವಳಿ.

**ಉಪಸ್ಥಿತರು:**

| | | |
|---|---|---|
| 1. | ಪ್ರೊ. ಎನ್.ಕೆ. ಲೋಕನಾಥ್ | ಕುಲಪತಿ ಹಾಗೂ ಅಧ್ಯಕ್ಷರು |
| 2. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರ ಪರವಾಗಿ<br>ಪ್ರೊ. ಎ.ಹೆಚ್.ಎಂ. ವಿಜಯಲಕ್ಷ್ಮಿ, ಜಂಟಿ ನಿರ್ದೇಶಕರು<br>ಕಾಲೇಜು ಶಿಕ್ಷಣ ಇಲಾಖೆ, ಮೈಸೂರು | ಸದಸ್ಯರು |
| 3. | ಪ್ರೊ. ಸೊನರ್ ನಂದಪ್ಪ | ಸದಸ್ಯರು |
| 4. | ಪ್ರೊ. ಟಿ.ಆರ್. ಮಾರುತಿ | ಸದಸ್ಯರು |
| 5. | ಡಾ. ಟಿ.ಆರ್. ಚಂದ್ರಶೇಖರ್, ಬಿ.ಇ., ಎಂಬಿಇ., ಎಂ.ಎ., ಪಿಎಚ್.ಡಿ., | ಸದಸ್ಯರು |
| 6. | ಶ್ರೀ ಗೋಕುಲ್ ಗೋವರ್ಧನ್, ಎಲ್‌ಎಲ್‌ಬಿ., ಎಂಬಿಎ., | ಸದಸ್ಯರು |
| 7. | ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ | |
| 8. | ಡಾ. ಗಣೇಶ್ .ಕೆ | ಸದಸ್ಯರು |
| 9. | ಡಾ. ಮುಜೀದ ಬಾನು | ಸದಸ್ಯರು |
| 10. | ಡಾ. ಆಂತೋನಿ ಪೌಲ್ ರಾಜ್ .ಸಿ | ಸದಸ್ಯರು |
| 11. | ಶ್ರೀ ಮಹದೇಶು | ಸದಸ್ಯರು |
| 12. | ಶ್ರೀ ನಾಗರಾಜು .ಸಿ | ಸದಸ್ಯರು |
| 13. | ಡಾ. ಬಸವರಾಜು .ಸಿ | ಸದಸ್ಯರು |
| 14. | ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫಾ | |
| 15. | ಡಾ. ಶಿಲ್ಪ .ಜೆ | ಸದಸ್ಯರು |
| 16. | ಶ್ರೀ ನಟರಾಜು .ಹೆಚ್.ಎಸ್ | ಸದಸ್ಯರು |
| 17. | ಪ್ರೊ. ಕೆ.ಎಂ.ಮಹದೇವನ್, ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 18. | ಶ್ರೀಮತಿ ವಿ.ಆರ್. ಶೈಲಜ, KAS | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ |
| 19. | ಶ್ರೀಮತಿ ರೇಖಾ.ಕೆ.ಎಸ್., ಕೆಎಸ್ಎಎಸ್, ಹಣಕಾಸು ಅಧಿಕಾರಿಗಳು | ವಿಶೇಷ ಆಹ್ವಾನಿತರು |

**ಅನುಪಸ್ಥಿತರು:**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ

ಮೊದಲಿಗೆ ಮಾನ್ಯ ಕುಲಸಚಿವರು ಸಭೆಯ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ನಂತರ ಹೊಸದಾಗಿ ಸಿಂಡಿಕೇಟ್ ಸದಸ್ಯರಾಗಿ ಹೊಸದಾಗಿ ನೇಮಕಗೊಂಡಿರುವ ಡಾ. ಅಂತೋಣಿ ಪೌಲ್ ರಾಜ್.ಸಿ, ಪ್ರಾಂಶುಪಾಲರು, ಛಾಯಾದೇವಿ ಬಿ.ಇಡಿ ಕಾಲೇಜು, ರಾಜೇಂದ್ರನಗರ, ಮೈಸೂರು ಇವರನ್ನು ಸಭೆಗೆ ಸ್ವಾಗತಿಸಿದರು.

ಹಾಗೂ

ಇದುವರೆವಿಗೂ ಸಿಂಡಿಕೇಟಿನ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಶ್ರೀಮತಿ ಸೌಮ್ಯ ಈರಪ್ಪ.ಕೆ, ಪ್ರಾಂಶುಪಾಲರು, ಶೇಷಾದ್ರಿಪುರಂ ಪದವಿ ಕಾಲೇಜು, ಹೆಬ್ಬಾಳ್, ಮೈಸೂರು ಇವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

ನಂತರ, ಮಾನ್ಯ ಕುಲಪತಿಯವರ ಅನುಮತಿಯ ಮೇರೆಗೆ ಈ ಕೆಳಕಂಡ ಕಾರ್ಯಸೂಚಿಗಳನ್ನು ಕುಲಸಚಿವರು ಮಂಡಿಸಿದರು.

| **ವಿಷಯ ಸಂಖ್ಯೆ** | **ವಿಷಯ ಸಂಕ್ಷಿಪ್ತವಾಗಿ** |
|---|---|
| **ದಿನಾಂಕ : 25-01-2024ರಂದು ಜರುಗಿದ "ಸಿಂಡಿಕೇಟಿನ ಮೊದಲನೇ ಸಾಮಾನ್ಯ ಸಭೆ"ಯ ನಡವಳಿಯನ್ನು ದೃಢೀಕರಿಸುವ ಬಗ್ಗೆ.<br>ಹಾಗೂ<br>ದಿನಾಂಕ : 03-03-2024ರಂದು ನಡೆದ 104ನೇ ಘಟಿಕೋತ್ಸವದ ಪ್ರಯುಕ್ತ ನಡೆದ "ಸಿಂಡಿಕೇಟಿನ ವಿಶೇಷ ಸಭೆ"ಯ ನಡವಳಿಯನ್ನು ದೃಢೀಕರಿಸುವ ಬಗ್ಗೆ.** | |
| **ತೀರ್ಮಾನ** | **ದಿನಾಂಕ: 25-01-2024ರಂದು ಜರುಗಿದ "ಸಿಂಡಿಕೇಟಿನ ಮೊದಲನೇ ಸಾಮಾನ್ಯ ಸಭೆ"ಯ ನಡವಳಿಯನ್ನು ಹಾಗೂ ದಿನಾಂಕ: 03-03-2024ರಂದು ನಡೆದ 104ನೇ ಘಟಿಕೋತ್ಸವದ ಪ್ರಯುಕ್ತ ನಡೆದ "ಸಿಂಡಿಕೇಟಿನ ವಿಶೇಷ ಸಭೆ"ಯ ನಡವಳಿಯನ್ನು ಮತ್ತು ತೆಗೆದುಕೊಂಡಿರುವ ಕ್ರಮವನ್ನು ದೃಢೀಕರಿಸಲಾಯಿತು.** |
| **ಸಾಮಾನ್ಯ ಸಭೆ 2024/2.1** | "Desirazu Endowment Lectures" ದತ್ತಿ ಉಪನ್ಯಾಸ ಸ್ಥಾಪನೆ ಮಾಡುವ ಬಗ್ಗೆ. |
| | ಶ್ರೀ ನಟರಾಜು ರವರು ಮಾತನಾಡಿ, ಕನ್ನಡ ಭಾಷೆಯಲ್ಲಿಯೇ ಪರೀಕ್ಷೆ ಬರೆದು ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗೆ ಪ್ರೊ. ವೆಂಕಟೇಶ್ ಕುಮಾರ್ ರವರ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡಿದ್ದು, 2021-22ನೇ ಸಾಲಿನಿಂದ ಇಂದಿನವರೆಗೂ ಚಿನ್ನದ ಪದಕ ನೀಡಿರುವುದಿಲ್ಲವೆಂದು ತಿಳಿಸಿದರು.<br>ಡಾ. ಶಿಲ್ಪ ಜೆ. ಅವರು ಮಾತನಾಡಿ, ಕನ್ನಡ ಭಾಷೆಯಲ್ಲಿ ಬರೆದಿಲ್ಲ ಎಂದು ಕಾರಣ ನೀಡಿರುತ್ತಾರೆ. ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿಯೇ ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದಾರೆ. ಆದ್ದರಿಂದ ಕನ್ನಡ ಭಾಷೆಯಲ್ಲಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡಿ ಎಂದಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.<br>ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ, ದತ್ತಿ ಸ್ಥಾಪಕರು ಕನ್ನಡ ಭಾಷೆಯಲ್ಲಿಯೇ ಪರೀಕ್ಷೆ ಬರೆದು ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ನೀಡಬೇಕೆಂದು ತಿಳಿಸಿರುತ್ತಾರೆ. ಆದರೆ ಕನ್ನಡ ಭಾಷೆಯಲ್ಲಿಯೇ ಪರೀಕ್ಷೆ ಬರೆದು ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು ಲಭ್ಯವಿಲ್ಲದೆ ಇರುವುದರಿಂದ, ಇದುವರೆವಿಗೂ ಸದರಿ ಚಿನ್ನದ ಪದಕವನ್ನು ನೀಡಲು ಸಾಧ್ಯವಾಗಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು.<br>ಮಾನ್ಯ ಕುಲಪತಿಗಳು ಮಾತನಾಡಿ, ಪ್ರೊ. ವೆಂಕಟೇಶ್ ಕುಮಾರ್ ರವರಿಗೆ ಪತ್ರ ಬರೆದು ಕನ್ನಡ ಭಾಷೆಯಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿಲ್ಲವೆಂಬ ವಿಷಯವನ್ನು ಪ್ರಸ್ತಾಪಿಸಬೇಕೆಂದು ತಿಳಿಸಿದರು. ಮುಂದುವರೆದು ಸದರಿ ವಿಷಯವನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಬೇಕೆಂದು ಸೂಚಿಸಿದರು. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 29 (2) (r) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢಿಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ |

| | |
|---|---|
| | ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿಯ ಹಣದಲ್ಲಿ ಪ್ರತಿ ವರ್ಷ ಆಗಸ್ಟ್/ಸೆಪ್ಟೆಂಬರ್ ಮಾಹೆಯಲ್ಲಿ ದೇಶದ ಹೆಸರಾಂತ ವ್ಯಕ್ತಿಯಿಂದ ಮೈಸೂರು ವಿಶ್ವವಿದ್ಯಾನಿಲಯದ School of Planning & Architecture ನಲ್ಲಿ ದತ್ತಿ ಉಪನ್ಯಾಸವನ್ನು ಏರ್ಪಡಿಸುವ ಸಂಬಂಧ "Desirazu Endowment Lectures" ದತ್ತಿ ಉಪನ್ಯಾಸ ಏರ್ಪಡಿಸಲು ಸಿಂಡಿಕೇಟ್ ಅನುಮತಿಸಿತು. |
| ಸಾಮಾನ್ಯ ಸಭೆ 2024/2.2 | ವಿಶ್ವವಿದ್ಯಾನಿಲಯದಲ್ಲಿ "ಲೇಟ್ ಅಮರಾವತಿ ಮತ್ತು ಲೇಟ್ ಕೃಷ್ಣಾಚಾರಿ ನಗದು ಬಹುಮಾನ", "ಪ್ರೊ. ಮಲ್ಲಿನಾಥ ಕುಂಬಾರರ ಅಭಿನಂದನಾ ನಗದು ಬಹುಮಾನ" ಮತ್ತು "ಪ್ರೊ. ಬಿ.ಎಸ್. ಕಿರಣಗಿ ಚಿನ್ನದ ಪದಕ" ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ. |
| | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ರನ್ವಯ ಪ್ರಕರಣ 29 (2) (r) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿಯ ಹಣದಲ್ಲಿ ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಈ ಕೆಳಕಂಡ ಎರಡು ನಗದು ಬಹುಮಾನಗಳ ಮತ್ತು ಒಂದು ಚಿನ್ನದ ಪದಕದ ದತ್ತಿಯನ್ನು ಸ್ಥಾಪನೆ ಮಾಡಲು ಸಿಂಡಿಕೇಟ್ ಸಭೆಯು ಅನುಮತಿಸಿತು. |

| ದಾನಿಗಳು ಕೋರಿರುವ ದತ್ತಿಯ ಹೆಸರು | ದಾನಿಗಳ ಹೆಸರು ಮತ್ತು ವಿಳಾಸ | ಷರತ್ತುಗಳು | ಪಾವತಿಸಿರುವ ಮೊತ್ತ |
|---|---|---|---|
| "ಲೇಟ್ ಅಮರಾವತಿ ಮತ್ತು ಲೇಟ್ ಕೃಷ್ಣಾಚಾರಿ ನಗದು ಬಹುಮಾನ" | ಶ್ರೀಮತಿ ಶೋಭರಾಮ್.ಕೆ # 862, 2ನೇ ಕ್ರಾಸ್, ಕಮ್ಮಳಗೇರಿ, ಇಂದಿರನಗರ, ಮೈಸೂರು–10 | M.A in Hindi in First Attempt and Securing Highest Marks | 50,000/- |
| "ಪ್ರೊ. ಮಲ್ಲಿನಾಥ ಕುಂಬಾರರ ಅಭಿನಂದನಾ ನಗದು ಬಹುಮಾನ" | ಪ್ರೊ. ಮಲ್ಲಿನಾಥ ಕುಂಬಾರ, # 778, 12ನೇ ಮುಖ್ಯ ರಸ್ತೆ, 14ನೇ ಅಡ್ಡರಸ್ತೆ, ಕೆ.ಹೆಚ್.ರಸ್ತೆ, ಸರಸ್ವತಿಪುರಂ, ಮೈಸೂರು–9 | Master of Library Science in First Attempt and Securing Highest Marks | 50,000/-<br>5,000/- |
| "ಪ್ರೊ. ಬಿ.ಎಸ್.ಕಿರಣಗಿ ಚಿನ್ನದ ಪದಕ" | Smt. Parwati B Kiranagi, # 1048, 1st Cross, 1st Main, Mysore Nirmithi Kendra Road, Bogadi North, Bogadi 2nd Stage, mysore-26 | M.Sc in Mathematics in First Attempt and Securing Highest Marks | 1,00,000/-<br>50,000/- |

| | |
|---|---|
| ಸಾಮಾನ್ಯ ಸಭೆ 2024/2.3 | ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| | ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಪ್ರತಿ ಸಿಂಡಿಕೇಟ್‌ನಲ್ಲಿ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ ವಿಷಯವನ್ನು ಪ್ರಸ್ತಾಪಿಸಲಾಗುತ್ತದೆ, ಸಿನಿಯಾರಿಟಿ ಲಿಸ್ಟ್ ಕೊಡುತ್ತೀರಿ. ಉದಾಹರಣೆಗೆ ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗಕ್ಕೆ ಸಂಬಂಧಿಸಿದ ಜೇಷ್ಠತಾ ಪಟ್ಟಿಯನ್ನು ನೀಡಿ ಎಂದರೆ ವಿಶ್ವವಿದ್ಯಾನಿಲಯದ ಎಲ್ಲಾ ಅಧ್ಯಯನ ವಿಭಾಗದ ಜೇಷ್ಠತೆಯ ಪಟ್ಟಿಯನ್ನು ನೀಡಿರುತ್ತೀರಿ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಎರಡು ವರ್ಷಗಳಿಗೊಮ್ಮೆ ವಿಭಾಗದ ಅಧ್ಯಕ್ಷರನ್ನು ಬದಲಾವಣೆ ಮಾಡಲಾಗುತ್ತದೆ. ಮುಂದೆ ವಿಭಾಗದ ಅಧ್ಯಕ್ಷರನ್ನು ನೇಮಕ ಮಾಡಿ ಅನುಸಮರ್ಥನೆಗಾಗಿ ಸಿಂಡಿಕೇಟ್ ಸಭೆಗೆ ಮಂಡಿಸಲಾಗುವುದು. ಸದಸ್ಯರುಗಳಿಗೆ ಅಧ್ಯಯನ |

ವಿಭಾಗದ ಅಧ್ಯಕ್ಷರ ನೇಮಕಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆ ಇದ್ದಲ್ಲಿ ಸಿಂಡಿಕೇಟ್‌ಗೆ ಮಂಡಿಸಬಹುದೆಂದು ತಿಳಿಸಿದರು. ನಾವು ಜೇಷ್ಠತೆಯ ಆಧಾರದ ಮೇಲೆ ವಿಭಾಗದ ಅಧ್ಯಕ್ಷರನ್ನು ನೇಮಕ ಮಾಡುತ್ತಿರುವುದಾಗಿ ತಿಳಿಸಿದರು.

ಕುಲಸಚಿವರು ಮಾತನಾಡಿ, ಪ್ರೊಫೆಸರ್‌ಗಳ ನೇಮಕ Facultywise ಮಾಡುವುದಿಲ್ಲ ಜೇಷ್ಠತೆಯ ಪ್ರಕಾರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳನ್ನು ನೇಮಕ ಮಾಡುತ್ತಿರುವುದರಿಂದ ನಿಯಮ ಉಲ್ಲಂಘಿಸಿರುವುದಿಲ್ಲವೆಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಸಿಂಡಿಕೇಟ್‌ಗೆ ಸಲ್ಲಿಸಿರುವ ಪ್ರತಿಗಳು ಸ್ಪಷ್ಟವಾಗಿ ಕಾಣುತ್ತಿಲ್ಲ. ಪುಟದ ಎರಡು ಕಡೆಯು ಪ್ರಿಂಟ್ ಮಾಡಿ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ ಸದಸ್ಯರುಗಳಿಗೆ ವಿವರಗಳನ್ನೊಳಗೊಂಡ ಪ್ರತಿಗಳನ್ನು ಸಾಫ್ಟ್‌ಕಾಪಿ ಮೂಲಕ ನೀಡಲಾಗುವುದೆಂದು ತಿಳಿಸಿದರು.

ಶ್ರೀ ನಾಗರಾಜು ಸಿ. ಅವರು ಮಾತನಾಡಿ ಡಾ. ನವಿತ ತಿಮ್ಮಯ್ಯರವರು Guideship ತೆಗೆದುಕೊಂಡಿದ್ದಾರೆಯೇ ಎಂದು ಪ್ರಶ್ನಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ ಸದರಿಯವರು ಈಗಾಗಲೇ Guideship ತೆಗೆದುಕೊಂಡಿದ್ದಾರೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ ಡಾ. ನವಿತ ತಿಮ್ಮಯ್ಯರವರು Guideship ತೆಗೆದುಕೊಂಡಿದ್ದಾರೆ ಹಾಗೂ ಈಗಾಗಲೇ ವಿದೇಶಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿರುತ್ತಾರೆಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, guiding, Ph.D ಇಲ್ಲಿ ಬರುವುದಿಲ್ಲ ಜೇಷ್ಠತೆಯ ಆಧಾರದ ಮೇಲೆ ನೇಮಕ ಮಾಡಲಾಗುತ್ತದೆ. It is a rotation and seniority basis ಎಂದು ತಿಳಿಸಿದರು. ಇದಕ್ಕೆ ಕುಲಸಚಿವರು ಸಹ ಸಮ್ಮತಿಸಿದರು.

ಡಾ. ಬಸವರಾಜು ಸಿ. ಅವರು ಮಾತನಾಡಿ ಎಲ್ಲಾ ಅಧ್ಯಾಪಕರು Guideship ಅನ್ನು ಕಡ್ಡಾಯವಾಗಿ ತೆಗೆದುಕೊಳ್ಳಬೇಕಾ ಎಂದು ಪ್ರಶ್ನಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ Guideship ಕಡ್ಡಾಯವಾಗಿ ತೆಗೆದುಕೊಳ್ಳಲೇಬೇಕು ಎನ್ನುವ ಷರತ್ತಿಲ್ಲ. ಅಧ್ಯಾಪಕರು ಉನ್ನತ ಹುದ್ದೆಗೆ ಪದೋನ್ನತಿ ಹೊಂದುವ ಸಂದರ್ಭದಲ್ಲಿ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದ್ದರೆ ಅವರಿಗೆ ಹೆಚ್ಚಿನ ಅನುಕೂಲವಾಗುತ್ತದೆಂದು ತಿಳಿಸಿದರು. ನಿವೃತ್ತಿಗೊಳ್ಳುವ ಹಂತದಲ್ಲಿರುವ ಅಧ್ಯಾಪಕರು ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಕರ್ತವ್ಯ ನಿರ್ವಹಿಸುವುದಕ್ಕೆ ನಿರಾಕರಿಸುತ್ತಿದ್ದಾರೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಅಧ್ಯಾಪಕರು ಉನ್ನತ ಹುದ್ದೆಗೆ ಪದೋನ್ನತಿ ಹೊಂದುವ ಸಂದರ್ಭದಲ್ಲಿ API Score ಅನ್ನು ಹೆಚ್ಚಿಸಿಕೊಳ್ಳಲು ಅನುಕೂಲವಾಗುತ್ತದೆಂದು ತಿಳಿಸಿದರು.

ಶ್ರೀ ನಾಗರಾಜು ಸಿ. ಅವರು ಮಾತನಾಡಿ ನಿವೃತ್ತಿಗೊಳ್ಳುವ ಹಂತದಲ್ಲಿರುವ ಅಧ್ಯಾಪಕರು ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಕರ್ತವ್ಯ ನಿರ್ವಹಿಸಿದ್ದಲ್ಲಿ ಮಾರ್ಗದರ್ಶಕರ ಕೊರತೆಯನ್ನು ನೀಗಿಸಬಹುದೆಂದು ಸಹ ತಿಳಿಸಿದರು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅಧ್ಯಾಪಕರು ಕಡ್ಡಾಯವಾಗಿ ಮಾರ್ಗದರ್ಶಕರಾಗಬೇಕೆಂದು ತಿಳಿಸಿದರು.

ಶ್ರೀ ನಟರಾಜ್ ಹೆಚ್.ಎಸ್. ಅವರು ಮಾತನಾಡಿ ಸಂಶೋಧನೆಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಅಧ್ಯಾಪಕರುಗಳು ಮಾರ್ಗದರ್ಶಕರಾಗಿ ಕರ್ತವ್ಯ ನಿರ್ವಹಿಸಬೇಕೆಂದು ತಿಳಿಸಿದರು.

ಶ್ರೀ. ನಾಗರಾಜು ಸಿ. ಅವರು ಮಾತನಾಡಿ ಗ್ರಾಮೀಣ ಪ್ರದೇಶದಿಂದ ಬರುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರ ಅವಶ್ಯಕತೆ ಇರುವುದರಿಂದ ಕಡ್ಡಾಯವಾಗಿ ಅಧ್ಯಾಪಕರು ಮಾರ್ಗದರ್ಶಕರಾಗಿ ತಮ್ಮ ಕರ್ತವ್ಯ ನಿರ್ವಹಿಸುವಂತೆ ಕ್ರಮಕೈಗೊಳ್ಳಿ ಎಂದು ತಿಳಿಸಿದರು.

| | |
|---|---|
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರನ್ನು ನೇಮಕ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಿ, ನಂತರ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗೆ ಮಂಡಿಸಲು ತೀರ್ಮಾನಿಸಿತು.<br><br>ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಡಾ. ನವಿತ ತಿಮ್ಮಯ್ಯ, ಪ್ರಾಧ್ಯಾಪಕರು, ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 08-05-2024 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2024/2.4 | ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ನಿರ್ದೇಶಕರನ್ನು ನೇಮಕ ಮಾಡುವ ಬಗ್ಗೆ. |
| | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಪ್ರೊ. ಎನ್.ಕೆ.ಲೋಲಾಕ್ಷಿ, ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 27-05-2024ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2024/2.5 | ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| | ಡಾ. ಬಸವರಾಜು ಸಿ. ರವರು ಮಾತನಾಡಿ ಪ್ರೊ. ಹೆಚ್. ರಾಜಶೇಖರ್ ರವರ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣವಿರುವುದರಿಂದ ಅವರನ್ನು ವಿಭಾಗದ ಅಧ್ಯಕ್ಷರಾಗಿ ನೇಮಕ ಮಾಡಬಹುದೇ ಎಂದು ಪ್ರಶ್ನಿಸಿದರು.<br><br>ಕುಲಸಚಿವರು ಮಾತನಾಡಿ, (Allegation is allegation it is not a decision) ಆರೋಪವು ಆರೋಪವಾಗಿದೆಯೇ ಹೊರತು ಅದೇ ನಿರ್ಣಯವಲ್ಲ. ಇವರ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ನ್ಯಾಯಾಲಯವು ತಡೆಯಾಜ್ಞೆ ನೀಡಿರುವುದನ್ನು ಸಭೆಯ ಗಮನಕ್ಕೆ ತಂದರು. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಪ್ರೊ. ಹೆಚ್.ರಾಜಶೇಖರ್, ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 01-06-2024ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2024/2.6 | ಮಾಲಿಕ್ಯುಲರ್ ಬಯಾಲಜಿ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| | ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫಾರವರು ಮಾತನಾಡಿ ಪುಟ ಸಂಖ್ಯೆ 22ರ ಸುತ್ತೋಲೆಯಲ್ಲಿನ ಕ್ರಮ ಸಂಖ್ಯೆ 4 "Where there are neither Professor, nor Associate Professor in the department, chairmanship shall rotate among the Assistant Professors" ಎಂದಿರುವುದನ್ನು ಸಭೆಯ ಗಮನಕ್ಕೆ ತಂದರು. ಮುಂದುವರೆದು, ಈ ಪ್ರಕಾರ ಇಂಗ್ಲೀಷ್ ಅಧ್ಯಯನ ವಿಭಾಗದಲ್ಲಿ ಖಾಯಂ ಪ್ರೊಫೆಸರ್‌ರವರಿದ್ದಾರೆ. ಅವರನ್ನು ಜೇಷ್ಠತಾ ಪಟ್ಟಿಯಿಂದ ಕೈಬಿಟ್ಟಿರುವುದಕ್ಕೆ ಕಾರಣವೇನು ಎಂದು ಕೇಳಿದರು. |

| | |
|---|---|
| | ಮಾನ್ಯ ಕುಲಪತಿಯವರು ಮಾತನಾಡಿ ಹಿಂದೆ ಈ ರೀತಿಯ ತಪ್ಪಾಗಿದ್ದು, ಪ್ರಸ್ತುತ ಅದನ್ನು ಸರಿಪಡಿಸುತ್ತೇವೆಂದು ಹಾಗೂ ಅವರು ಅರ್ಹರಾಗಿರುವರೆಂದು (eligible) ತಿಳಿಸಿದರು. ಅಧ್ಯಯನ ವಿಭಾಗದ ಅಧ್ಯಾಪಕರ ಜೇಷ್ಠತೆಯ ಆಧಾರದ ಮೇಲೆ ಅಧ್ಯಕ್ಷರಾಗಬೇಕೆಂದು ತಿಳಿಸಿದರು. ಪ್ರಸ್ತುತ ವಿಭಾಗದಲ್ಲಿರುವ ಅಧ್ಯಾಪಕರನ್ನು ಕೈಬಿಡಲು ಕಾರಣವೇನೆಂದರೆ ಅವರು Assistant Professors ಎಂದು ಅವರು ಹೇಳಿದರು. ನಂತರ ಈ ಸುತ್ತೋಲೆಯನ್ನು ಹೊರಡಿಸಲಾಯಿತು. ಮುಂದುವರೆದು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಿಂದ ಸಮಸ್ಯೆಗಳು ಪ್ರಾರಂಭವಾಯಿತು. ಪ್ರೊ. ವಿಜಯ ಶೇಷಾದ್ರಿರವರು ಜೇಷ್ಠತೆಯ ಆಧಾರದ ಮೇಲೆ ಇಂಗ್ಲೀಷ್ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿ ನಿರ್ಗಮಿಸಿದರು. ಆದ್ದರಿಂದ ಮಾನಸಗಂಗೋತ್ರಿಯಲ್ಲಿರುವ ಅಧ್ಯಾಪಕರನ್ನೇ ನಿಯಮಗಳಡಿ ಪರಿಶೀಲಿಸಿ ಜೇಷ್ಠತೆಯ ಆಧಾರದ ಮೇಲೆ ವಿಭಾಗಗಳ ಅಧ್ಯಕ್ಷರಾಗಿ ನೇಮಕ ಮಾಡಲಾಗುವುದೆಂದು ತಿಳಿಸಿದರು.<br><br>ಡಾ. ಬಸವರಾಜು ಸಿ. ಅವರು ಮಾತನಾಡಿ ಮಾನಸಗಂಗೋತ್ರಿಯಲ್ಲಿರುವ ಪ್ರಾಧ್ಯಾಪಕರುಗಳನ್ನು ನಿರ್ದೇಶಕರು / ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕೆಂದಿದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ ಅಧ್ಯಯನ ವಿಭಾಗದ ಸದಸ್ಯರೇ ಅಧ್ಯಕ್ಷರಾಗಬೇಕೆಂಬ ನಿಯಮವು ತಪ್ಪಿ ಹೋಗಿತ್ತು. ಇದನ್ನು ಈಗಾಗಲೇ ಸರಿಪಡಿಸಲಾಗಿದೆ ಎಂದು ತಿಳಿಸಿದರು. |
| **ತೀರ್ಮಾನ** | ಮಾಲಿಕ್ಯುಲರ್ ಬಯಾಲಜಿ ಅಧ್ಯಯನ ವಿಭಾಗ ಅಧ್ಯಾಪಕರುಗಳ ಜೇಷ್ಠತೆಯ ಆಧಾರದ ಮೇಲೆ ಅಧ್ಯಕ್ಷರನ್ನು ನೇಮಕ ಮಾಡುವ ವಿವೇಚನಾಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.<br>ಮುಂದುವರೆದು, ಇಂಗ್ಲಿಷ್ ಅಧ್ಯಯನ ವಿಭಾಗದಲ್ಲಿನ ಅಧ್ಯಾಪಕರುಗಳ ಜೇಷ್ಠತೆಯನ್ನು ನಿಯಮಗಳಡಿ ಪರಿಶೀಲಿಸಿ ಅಧ್ಯಕ್ಷರ ನೇಮಕಾತಿ ಮಾಡುವ ವಿವೇಚನಾಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2024/2.7** | 2023-24ನೇ ಶೈಕ್ಷಣಿಕ ಸಾಲಿನಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಹೊಸ ಕೋರ್ಸುಗಳು/ವಿಷಯಗಳನ್ನು ಪ್ರಾರಂಭಿಸಲು ಸ್ಥಳೀಯ ವಿಚಾರಣಾ ಸಮಿತಿಯು ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲಿಸಿ ನೀಡಿರುವ ವರದಿಯನ್ನು ಅನುಸಮರ್ಥನೆಗಾಗಿ ಮಂಡಿಸುವ ಬಗ್ಗೆ. |
| | ಕುಲಸಚಿವರು ಮಾತನಾಡಿ 2023-24ನೇ ಶೈಕ್ಷಣಿಕ ಸಾಲಿನಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಹೊಸ BCA ಕೋರ್ಸುಗಳನ್ನು ಪ್ರಾರಂಭಿಸಲು ಸರ್ಕಾರಿ ಆದೇಶದ ಮೇರೆಗೆ ನೇರವಾಗಿ UUCMSನಲ್ಲಿ ಪ್ರವೇಶಾತಿ ಮಾಹಿತಿಯನ್ನು ಅಪ್‌ಲೋಡ್ ಮಾಡಬೇಕಾಗಿರುವುದರಿಂದ ಒಂಬತ್ತು ಕಾಲೇಜಿನವರು ಸಂಯೋಜನೆ ನೀಡಿ ಎಂದು ಕೋರಿದ್ದರಿಂದ ಶೈಕ್ಷಣಿಕ ಹಿತದೃಷ್ಟಿಯಿಂದ ಸಂಯೋಜನಾ ಮಂಜೂರಾತಿ ಆದೇಶವನ್ನು ನೀಡಲಾಗಿದ್ದು ಸಿಂಡಿಕೇಟ್ ಅನುಸಮರ್ಥನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ UUCMS ಎಂದರೇನು ಹಾಗೂ ಅದರ ವಿವರಣೆಯನ್ನು ನೀಡಿ ಎಂದು ಸಭೆಯಲ್ಲಿ ಕೋರಿದರು.<br><br>ಕುಲಸಚಿವರು ಮಾತನಾಡಿ Unified University and College Management System. It is a online software.<br>ಜಂಟಿ ನಿರ್ದೇಶಕರು ಮಾತನಾಡಿ UUCMSನಲ್ಲಿ Online admission, examinations, Internal assessment, marks card ಎಲ್ಲವೂ ಸಹ ಅಪ್‌ಲೋಡ್ ಆಗುತ್ತದೆ. ಡಿಜಿಟಲ್ ಮಾರ್ಕ್ಸ್‌ಕಾರ್ಡ್ ಸಹ ಪಡೆಯಬಹುದಾಗಿದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ BCA ಕೋರ್ಸುಗಳಿಗೆ ಹಿಂದಿನ ಶೈಕ್ಷಣಿಕ ವರ್ಷದಿಂದ ಬೇಡಿಕೆ ಹೆಚ್ಚಾಗಿದ್ದು, ಕೆಲವು ಶಾಸಕರು ಹಾಗೂ ಪ್ರಾಂಶುಪಾಲರುಗಳು ಸೇರಿ |

ಕಾಲೇಜು ಶಿಕ್ಷಣ ಇಲಾಖೆಯಿಂದ ಇಡೀ ರಾಜ್ಯದಲ್ಲಿ ಬೇಡಿಕೆ ಇರುವ ಕಾಲೇಜುಗಳಿಗೆ ಆದೇಶವನ್ನು ನೀಡಿರುತ್ತಾರೆ. ಪರೀಕ್ಷಾ ಸಂದರ್ಭದಲ್ಲಿ ಅವರಿಗೆ ವಿಶ್ವವಿದ್ಯಾನಿಲಯದಿಂದ ಸಂಯೋಜನಾ ಮಂಜೂರಾತಿ ಆದೇಶ ಬೇಕು ಎಂದು ತಿಳಿಯಿತು. ವಿಶ್ವವಿದ್ಯಾನಿಲಯಕ್ಕಾಗಲಿ, ಉನ್ನತ ಶಿಕ್ಷಣ ಇಲಾಖೆಗಾಗಲಿ ಮಾಹಿತಿ ಇಲ್ಲ. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆಯವರು ಆದೇಶವನ್ನು ನೀಡಿರುತ್ತಾರೆ. ಶೈಕ್ಷಣಿಕ ವರ್ಷ ಪ್ರಾರಂಭವಾಗಿದ್ದರಿಂದ ವಿದ್ಯಾರ್ಥಿಗಳು ಪ್ರವೇಶಾತಿ ಹೊಂದಿದ್ದು, ಸರ್ಕಾರಿ ಕಾಲೇಜುಗಳಾಗಿದ್ದರಿಂದ ಹಾಗೂ ಸರ್ಕಾರದ ಆದೇಶದನ್ವಯ ಸ್ಥಳೀಯ ವಿಚಾರಣಾ ಸಮಿತಿಯು ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸಂಯೋಜನಾ ಮಂಜೂರಾತಿ ಆದೇಶವನ್ನು ನೀಡಿ, ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಅನುಮೋದನೆ ಪಡೆದು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಶ್ರೀ ಮಹದೇಶು ಅವರು ಮಾತನಾಡಿ ಪ್ರಯೋಗಾಲಯದ ಸೌಲಭ್ಯವಿರುವುದೇ ಎಂದು ಪ್ರಶ್ನಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಕೆಲವು ಕಾಲೇಜಿನಲ್ಲಿ ಪ್ರಯೋಗಾಲಯವಿರುತ್ತದೆ. ಕೆಲವು ಕಾಲೇಜಿನಲ್ಲಿ ಪ್ರಯೋಗಾಲಯವಿರುವುದಿಲ್ಲ ಆದರೆ ವಿದ್ಯಾರ್ಥಿಗಳು ಬೇರೆ ಕಾಲೇಜಿಗೆ ತೆರಳಿ ಪ್ರಯೋಗಾಲಯವನ್ನು ಉಪಯೋಗಿಸುತ್ತಾರೆ. ವಿಶ್ವವಿದ್ಯಾನಿಲಯದ ಸಮಿತಿಯು ಭೇಟಿ ನೀಡುವ ಮುನ್ನವೇ ಸರ್ಕಾರವೇ ಆದೇಶ ನೀಡಿದ್ದು, ಇದು ಸರ್ಕಾರಿ ಕಾಲೇಜಿನಲ್ಲಿ ಮಾತ್ರ ಎಂದು ಸಭೆಯ ಗಮನಕ್ಕೆ ತಂದರು.

ಕುಲಸಚಿವರು ಮಾತನಾಡಿ ಈಗಾಗಲೇ ೦೯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಸಂಯೋಜನೆ ಹೊಂದಿರುತ್ತವೆ ಎಂದು ತಿಳಿಸಿದರು.

ಜಂಟಿ ನಿರ್ದೇಶಕರು ಮಾತನಾಡಿ ವಿಡಿಯೋ ಕಾನ್ಫರೆನ್ಸ್ ಮೂಲಕ ಚರ್ಚಿಸಿದ್ದು, ಆಯುಕ್ತರೊಂದಿಗೆ ತಾವು ಸಹ ಭಾಗಿಯಾಗಿರುವೆನೆಂದು ಸಭೆಯ ಗಮನಕ್ಕೆ ತಂದರು.

ಶ್ರೀ ನಟರಾಜು .ಹೆಚ್.ಎಸ್ ಅವರು ಮಾತನಾಡಿ ವಿಶ್ವವಿದ್ಯಾನಿಲಯದ ಅಭಿಪ್ರಾಯವನ್ನು ತೆಗೆದುಕೊಳ್ಳಲಿಲ್ಲವೇ ಎಂದು ಪ್ರಶ್ನಿಸಿದರು. ಇದಕ್ಕುತ್ತರವಾಗಿ ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾನಿಲಯದ ಅಭಿಪ್ರಾಯವನ್ನು ತೆಗೆದುಕೊಂಡಿರುವುದಿಲ್ಲ ಎಂದು ತಿಳಿಸಿದರು. ಸರ್ಕಾರದ ಆದೇಶದ ಪ್ರತಿಯನ್ನು ಆಯುಕ್ತರು ತಮಗೆ ಸಲ್ಲಿಸಿಲ್ಲವೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, UUCMSನಲ್ಲಿ ಸದರಿ ಕಾಲೇಜುಗಳ ಸಂಯೋಜನಾ ಮಾಹಿತಿಗಳು ಕುಲಸಚಿವರ ಮೂಲಕ ಮೇಲುಸಹಿಯಾಗಬೇಕಾಗಿರುವುದರಿಂದ ಕಾಲೇಜಿನವರು ತಮ್ಮ ಬಳಿ ಬಂದರು ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ ಈಗಾಗಲೇ ಮೂರು ತಿಂಗಳಿನಿಂದ ಕಾಲೇಜು ನಡೆಯುತ್ತಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ತಾವು ಸಂಯೋಜನಾ ಮಂಜೂರಾತಿ ಆದೇಶ ನೀಡಿದ್ದು, ಕೆಲವು ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯಗಳಿರುವುದಿಲ್ಲವೆಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ ವಿಶ್ವವಿದ್ಯಾನಿಲಯದ ಸಮಿತಿಯು ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುವುದು ಉತ್ತಮವೆಂದು ತಿಳಿಸಿದರು.

ಶ್ರೀ ನಾಗರಾಜು ಸಿ. ಅವರು ಮಾತನಾಡಿ ಸೆಮಿಸ್ಟರ್ ಸ್ಕೀಂ ಇರುವುದರಿಂದ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ಎದುರಿಸಲು ತೊಂದರೆಯಾಗುವುದಿಲ್ಲವೆ ಎಂದು ಪ್ರಶ್ನಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದಿಲ್ಲ, ಕೆಲವೊಂದು ಕಾಲೇಜುಗಳಲ್ಲಿ ವಿಶ್ವವಿದ್ಯಾನಿಲಯದ ಗಮನಕ್ಕೆ ತರದೆ ವಿದ್ಯಾರ್ಥಿಗಳ ಪ್ರವೇಶಾತಿ ಮಾಡಲಾಗಿದೆ ಎಂದು ತಿಳಿಸಿದರು.

ಡಾ. ಅಂತೋನಿ ಪಾಲ್ ರಾಜ್ ಸಿ ರವರು ಮಾತನಾಡಿ UUCMSನಿಂದ ತುಂಬಾ ತೊಂದರೆಯಾಗುತ್ತಿದೆ ಎಂದು ತಿಳಿಸಿದರು. ಕೋರ್ಸ್ ಮುಗಿದರೂ ಸಹ ಅಂಕಪಟ್ಟಿ ನೀಡಲು ಸಾಧ್ಯವಾಗುತ್ತಿಲ್ಲ. ಪ್ರತಿಯೊಂದು ಕೋರ್ಸಿನ ಶೀರ್ಷಿಕೆಗಳು ವಿಭಿನ್ನವಾಗಿದೆ. ಸರ್ಕಾರಿ ಕಾಲೇಜಿನ ವಿದ್ಯಾರ್ಥಿಗಳನ್ನು ನಮ್ಮ ಬಿಎಡ್ ಕಾಲೇಜಿಗೆ ಪರಿವರ್ತಿಸಿ ಎಂದು ಆದೇಶ ಬಂದಿದೆ. ಆದರೆ UUCMS ಮುಚ್ಚಲಾಗಿದೆ. ಪುನ: ತಾವು ಪತ್ರವನ್ನು ಸಲ್ಲಿಸಲಾಗಿ ಬೆಂಗಳೂರಿನಲ್ಲೇ ಆಗಬೇಕೆಂದು ತಿಳಿಸಿರುತ್ತಾರೆ. ಮುಂದುವರೆದು, ವಿಶ್ವವಿದ್ಯಾನಿಲಯದಿಂದ ಈಗಾಗಲೇ ತಮಗೆ ಪತ್ರ ಬಂದಿದ್ದು ದಿ.22-03-2024 ರೊಳಗೆ ಅನುಮೋದನೆ ಪಡೆಯದಿದ್ದಲ್ಲಿ, ಪರೀಕ್ಷೆಗೆ ಮಾನ್ಯತೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. UUCMS ಅನ್ನು ಸ್ಥಗಿತಗೊಳಿಸಿ ವಿಶ್ವವಿದ್ಯಾನಿಲಯಕ್ಕೆ ಆದೇಶ ನೀಡಿ ಬಿ.ಎಡ್. ಅಸೋಸಿಯೇಷನ್‌ನಿಂದ ಮನವಿಯನ್ನು ಸಲ್ಲಿಸಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಜಂಟಿ ನಿರ್ದೇಶಕರು ಮಾತನಾಡಿ UUCMS ನಿಂದ ಅನುಕೂಲಗಳಿವೆ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ UUCMS ನಿಂದ ಅನುಕೂಲ ಹಾಗೂ ಅನಾನುಕೂಲಗಳೆರಡು ಇವೆ. ಅಂಕಪಟ್ಟಿಗಳನ್ನು ಕೊಡಿ ಎಂದು ಹೇಳುತ್ತಾರೆ. ನಾವು A4 sheet ನಲ್ಲಿ ಕೊಡಲು ಸಾಧ್ಯವಿಲ್ಲ. NAD ನಿಂದ ಅಂಕಪಟ್ಟಿಗಳನ್ನು ಪಡೆದುಕೊಳ್ಳಿ ಎಂದು ಹೇಳುತ್ತಾರೆ. ಆದರೆ, ಸಕಲೇಶಪುರ, ಕೊಳ್ಳೆಗಾಲ ಹಾಗೂ ಇತರೆ ಗ್ರಾಮೀಣ ಪ್ರದೇಶಗಳಲ್ಲಿ ಅಂತರ್ಜಾಲದ ಸೌಲಭ್ಯವಿರುವುದಿಲ್ಲ. Statutory Act ಪ್ರಕಾರ ಈಗಾಗಲೇ ಸಂಯೋಜನೆ ಕಾರ್ಯ ಪೂರ್ಣವಾಗಿ ದಿನಾಂಕ: 31-03-2024 ರೊಳಗೆ ಸರ್ಕಾರಕ್ಕೆ ವರದಿ ಸಲ್ಲಿಸಬೇಕು. ಉನ್ನತ ಶಿಕ್ಷಣ ಇಲಾಖೆ, ರಾಜ್ಯ ಉನ್ನತ ಶಿಕ್ಷಣ ಪರಿಷತ್ ಹಾಗೂ UUCMS ನಿಂದಲೇ ಎಲ್ಲಾ ಸಮಸ್ಯೆಗಳು ಇರುವುದು ಎಂದು ತಿಳಿಸಿದರು.

ಡಾ. ಮುಜೀದಾ ಬಾನು ಅವರು ಮಾತನಾಡಿ ಸರ್ಕಾರಿ ಕಾಲೇಜುಗಳಲ್ಲಿ ಪ್ರವೇಶಾತಿ ಸಂದರ್ಭದಲ್ಲಿ UUCMS ನಿಂದ ತೊಂದರೆಯಾಗುತ್ತಿದೆ ಎಂದು ತಿಳಿಸಿದರು. ಸಮಯಕ್ಕೆ ಸರಿಯಾಗಿ ಪ್ರವೇಶಾತಿ ಅನುಮೋದನೆ ನೀಡುತ್ತಿಲ್ಲವೆಂದು ಆರೋಪಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ ಸರ್ಕಾರವೇ ಅಂಕಪಟ್ಟಿಗಳನ್ನು ಮುದ್ರಿಸಬೇಡಿ ಎಂದು ಹೇಳುತ್ತದೆ, ವಿಶ್ವವಿದ್ಯಾನಿಲಯದಲ್ಲಿ ವಿದೇಶಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಅವರಿಗೆ ಅಂಕಪಟ್ಟಿಗಳನ್ನು ಮುಂದಿನ ವರ್ಷ ನೀಡಲು ಸಾಧ್ಯವಿಲ್ಲ. UUCMS ನಿಂದ ಹಲವಾರು ಸಮಸ್ಯೆಗಳು ಉದ್ಭವಿಸಿವೆ ಹಾಗೂ ಹಲವು ಶಿಕ್ಷಕರು UUCMS ಅನ್ನು ತೆಗೆದುಹಾಕಿ ಎಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ವಿದ್ಯಾರ್ಥಿಗಳಿಗೆ ನಿಗದಿತ ಅವಧಿಯಲ್ಲಿ ಅಂಕಪಟ್ಟಿಯನ್ನು ನೀಡದೆ ಇರುವುದು ಬೇಸರದ ಸಂಗತಿ ಎಂದು ತಿಳಿಸಿದರು. ಪ್ರಾಂಶುಪಾಲರನೊಳಗೊಂಡಂತೆ ಜಂಟಿ ನಿರ್ದೇಶಕರು ಸಭೆಯನ್ನು ಕರೆಯಬೇಕೆಂದು ಸೂಚಿಸಿದರು. ಎಲ್ಲಾ ಪ್ರಾಂಶುಪಾಲರನ್ನು ಕರೆಯಲು ಸಾಧ್ಯವಿಲ್ಲದ ಪಕ್ಷದಲ್ಲಿ ವಿಶ್ವವಿದ್ಯಾನಿಲಯದ ಕಾಲೇಜುಗಳ ಪ್ರಾಂಶುಪಾಲರುಗಳು, ಕುಲಸಚಿವರು ಹಾಗೂ ತಾವು ಚರ್ಚಿಸಿ UUCMS ನಿಂದ ಆಗುತ್ತಿರುವ ಸಮಸ್ಯೆಗಳನ್ನು ಪ್ರಸ್ತಾಪಿಸಬೇಕೆಂದರು.

ಪ್ರೊ ಯಜ್ಞಮೂರ್ತಿ ಶ್ರೀಕಾಂತ್ ಅವರು ಮಾತನಾಡಿ, UUCMS ನಿಂದ ಆಗುತ್ತಿರುವ ಸಮಸ್ಯೆಗಳಿಂದ ವಿಶ್ವವಿದ್ಯಾನಿಲಯವನ್ನೇ ನೇರ ಹೊಣೆಗಾರರನ್ನಾಗಿ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಜಂಟಿ ನಿರ್ದೇಶಕರು ಮಾತನಾಡಿ ಪ್ರಾಂಶುಪಾಲರನ್ನೊಳಗೊಂಡ ಸಭೆಯನ್ನು ಕರೆಯಲಾಗುವುದೆಂದು ಹಾಗೂ UUCMS ನಿಂದ ಆಗುತ್ತಿರುವ ಸಮಸ್ಯೆಗಳನ್ನು ಆಯುಕ್ತರಿಗೆ ಸಲ್ಲಿಸಲಾಗುವುದೆಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ virtual meeting ನಡೆಸಿದ್ದಲ್ಲಿ, UUCMS ನಿಂದಾಗುತ್ತಿರುವ ಸಮಸ್ಯೆಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಅರಿವಾಗುತ್ತದೆ ಎಂದು ತಿಳಿಸಿದರು.

ಶ್ರೀ ನಟರಾಜು .ಹೆಚ್.ಎಸ್ ಅವರು ಮಾತನಾಡಿ ಸರ್ಕಾರವು ಪಿಹೆಚ್.ಡಿ ಪ್ರವೇಶಾತಿ ಪರೀಕ್ಷೆಯನ್ನು KEA ಮೂಲಕ ನಡೆಸಲಾಗುವುದೆಂದು ಹೇಳಿರುತ್ತಾರೆ. ಇದಕ್ಕುತ್ತರವಾಗಿ ಮಾನ್ಯ ಕುಲಪತಿಯವರು ಮಾತನಾಡಿ, ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಅಧಿಕಾರಿಗಳೊಂದಿಗೆ ಸಮಾಲೋಚಿಸಲಾಗುವುದು ಎಂದು ಸಭೆಯ ಗಮನಕ್ಕೆ ತಂದರು.

ಶ್ರೀ ನಟರಾಜು ಹೆಚ್.ಎಸ್. ಅವರು ಮಾತನಾಡಿ ಇತರೆ ವಿಶ್ವವಿದ್ಯಾನಿಲಯಗಳಲ್ಲಿ ಈಗಾಗಲೇ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಅಂದರೆ ದಾವಣಗೆರೆ, ತುಮಕೂರು ಹಾಗೂ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಅಧಿಸೂಚನೆ ಹೊರಡಿಸಲಾಗಿದೆ ಎಂದು ತಿಳಿಸಿದರು. ಮಾನ್ಯ ಕುಲಪತಿಯವರು ಮಾತನಾಡಿ, ಪರೀಕ್ಷೆಯನ್ನು ನಡೆಸಬಾರದೆಂದು ಈಗಾಗಲೇ ಸರ್ಕಾರದಿಂದ ತಮಗೆ ಪತ್ರ ಬಂದಿರುವುದಾಗಿ ತಿಳಿಸಿದರು.

ಶ್ರೀ ನಟರಾಜು ಹೆಚ್.ಎಸ್. ಅವರು ಮಾತನಾಡಿ ನಮ್ಮ ವಿಶ್ವವಿದ್ಯಾನಿಲಯದಿಂದಲೇ ಪಿಹೆಚ್.ಡಿ ಪ್ರವೇಶಾತಿ ಹಾಗೂ ಕೆಸೆಟ್ ಪರೀಕ್ಷೆಗಳನ್ನು ನಡೆಸಿ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ನಿರ್ಧಾರಕ್ಕೆ ವಿಶ್ವವಿದ್ಯಾನಿಲಯವು ಬದ್ಧವಾಗಿದೆ ಎಂದು ತಿಳಿಸಿದರು.

**ತೀರ್ಮಾನ**

2023-24ನೇ ಶೈಕ್ಷಣಿಕ ಸಾಲಿನಿಂದ ಈ ಕೆಳಕಂಡ 09 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಹೊಸ ಕೋರ್ಸುಗಳು/ವಿಷಯಗಳನ್ನು ಪ್ರಾರಂಭಿಸಲು ಸ್ಥಳೀಯ ವಿಚಾರಣಾ ಸಮಿತಿಯು ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲಿಸಿ ನೀಡಿರುವ ವರದಿಯನ್ವಯ ಹಾಗೂ ಮಾನ್ಯ ಕುಲಪತಿಗಳ ಆದೇಶಾನುಸಾರ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮಂಜೂರಾತಿ ಆದೇಶ ನೀಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.

| ಕ್ರ. ಸಂ. | ಕಾಲೇಜುಗಳ ಹೆಸರು | ಕೋರ್ಸುಗಳು/ ವಿಷಯ | ಪ್ರವೇಶಾತಿ ಸಂಖ್ಯೆ |
|---|---|---|---|
| 1 | ಮಹಾರಾಣಿ ಮಹಿಳಾ ಕಲಾ ಕಾಲೇಜು ಜೆ.ಎಲ್.ಬಿ. ರಸ್ತೆ, ಮೈಸೂರು | BCA | 60 |
| 2 | ಮಹಾರಾಣಿ ಮಹಿಳಾ ಸರ್ಕಾರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ವಾಲ್ಮಿಕೀ ರಸ್ತೆ, ಪಡುವಾರಹಳ್ಳಿ, ಮೈಸೂರು | BCA | 120 |
| 3 | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ವಿಜಯನಗರ 4ನೇ ಹಂತ, 3ನೇ ಘಟ್ಟ, ಬೆಳವಾಡಿ ಅಂಚೆ, ಹೂಟಗಳ್ಳಿ, ಮೈಸೂರು-17 | BCA | 60 |
| 4 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಿದ್ಧಾರ್ಥನಗರ, ಮೈಸೂರು-570 011 | BCA | 60 |
| 5 | ಶ್ರೀ ಡಿ.ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು-571 105 | BCA | 60 |
| 6 | ಸರ್ಕಾರಿ ಮಹಿಳಾ ಕಾಲೇಜು ಹುಣಸೂರು-571105, ಮೈಸೂರು ಜಿಲ್ಲೆ | BCA | 60 |
| 7 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತಿ.ನರಸೀಪುರ-571 124, ಮೈಸೂರು ಜಿಲ್ಲೆ | BCA | 40 |
| 8 | ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಬಿನಿ ಕಾಲೋನಿ ಆವರಣ, ಬೈರಾಪುರ-571 124 | BCA | 40 |

| | | | | |
|---|---|---|---|---|
| | 9 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು<br>ಹರವೆ, ಮಲ್ಲರಾಜಪಟ್ಟಣ,<br>ಪಿರಿಯಾಪಟ್ಟಣ–571 107 | BCA | 60 |

| | |
|---|---|
| **ಸಾಮಾನ್ಯ ಸಭೆ 2024/2.8** | ಡಾ. ಎನ್.ಬಿ. ರಾಮಚಂದ್ರ, ನಿವೃತ್ತ ಪ್ರಾಧ್ಯಾಪಕರು, ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ಅಧ್ಯಯನ ವಿಭಾಗ ಇವರಿಗೆ ದುಬೈಗೆ ತೆರಳಲು ಅನುಮತಿ ನೀಡುವ ಬಗ್ಗೆ. |
| **ತೀರ್ಮಾನ** | ಡಾ. ಎನ್.ಬಿ.ರಾಮಚಂದ್ರ, ನಿವೃತ್ತ ಪ್ರಾಧ್ಯಾಪಕರು, ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ಅಧ್ಯಯನ ವಿಭಾಗ ಮತ್ತು DAE-Raja Ramanna Chair Awardee ಇವರು Raja Ramanna Chair Awardನ ಮಾರ್ಗಸೂಚಿಗಳನ್ವಯ ಅವರ ಹಕ್ಕಿನಲ್ಲಿರುವ ಸಾಂದರ್ಭಿಕ ರಜೆಯನ್ನು ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಯಾವುದೇ ರೀತಿಯ ಆರ್ಥಿಕ ಹೊಣೆಗಾರಿಕೆಯಿಲ್ಲದಂತೆ ದಿನಾಂಕ: 04-02-2024 ರಿಂದ 10-02-2024 ರವರೆಗೆ ದುಬೈ ಪ್ರವಾಸಕ್ಕೆ ತೆರಳಲು ಹಾಗೂ ಕೇಂದ್ರ ಸ್ಥಾನವನ್ನು ಬಿಡಲು ಮಾನ್ಯ ಕುಲಪತಿಯವರ ಆದೇಶಾನುಸಾರ ನೀಡಿರುವ ಅನುಮತಿ ಆದೇಶವನ್ನು ಸಿಂಡಿಕೇಟ್ ಸಭೆಯು ಸ್ಥಿರೀಕರಿಸಿತು. |
| **ಸಾಮಾನ್ಯ ಸಭೆ 2024/2.9** | ಡಾ. ಎಸ್. ಮಸೂದ್ ಸಿರಾಜ್, ನಿವೃತ್ತ ಪ್ರಾಧ್ಯಾಪಕರು, ಉರ್ದು ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಿಸಿರುವ ಬಗ್ಗೆ. |
| | ಕುಲಸಚಿವರು ಮಾತನಾಡಿ ಮಾನ್ಯ ಕುಲಪತಿಗಳ ಆದೇಶದನುಸಾರ ಡಾ. ಎಸ್.ಮಸೂದ್ ಸಿರಾಜ್, ನಿವೃತ್ತ ಪ್ರಾಧ್ಯಾಪಕರು, ಉರ್ದು ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಈಗಾಗಲೇ ಷರತ್ತು ವಿಧಿಸಿ ಶೈಕ್ಷಣಿಕ ಹಿತದೃಷ್ಟಿಯಿಂದ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಿಸಲಾಗಿದ್ದು, ಉರ್ದು ಅಧ್ಯಯನ ವಿಭಾಗದಲ್ಲಿ ಖಾಯಂ ಅಧ್ಯಾಪಕರು ಇಲ್ಲದಿರುವ ಅಂಶವನ್ನು ಸಭೆಯ ಗಮನಕ್ಕೆ ತರುತ್ತಾ, ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ರವರು ಮಾತನಾಡಿ ಬೇರೆ ಯಾರು ಪ್ರಾಧ್ಯಾಪಕರು ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿಲ್ಲವೇ ಎಂದು ಪ್ರಶ್ನಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ ಉರ್ದು ಅಧ್ಯಯನ ವಿಭಾಗದಲ್ಲಿ ಖಾಯಂ ಪ್ರಾಧ್ಯಾಪಕರಿರುವುದಿಲ್ಲ ಎಂಬ ವಿಷಯವನ್ನು ಸಭೆಯ ಗಮನಕ್ಕೆ ತಂದರು. ಡಾ. ಎಸ್. ಮಸೂದ್ ಸಿರಾಜ್ ರವರು ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದಿರುತ್ತಾರೆ. ಸದರಿಯವರು ಈಗಾಗಲೇ ಸಂದರ್ಶಕ ಪ್ರಾಧ್ಯಾಪಕರಾಗಿ ನೇಮಕಗೊಂಡಿದ್ದು, ಎರಡನೇ ಬಾರಿಗೆ ಅವರನ್ನು ಮುಂದುವರೆಸಲಾಗಿದೆ ಎಂದು ತಿಳಿಸಿದರು.<br><br>ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫಾ ಅವರು ಮಾತನಾಡಿ ಡಾ.ಎಸ್ ಮಸೂದ್ ಸಿರಾಜ್ ರವರು ಪ್ರಖ್ಯಾತ ಕವಿಗಳು, ಇವರು ಬಹಳಷ್ಟು ಪುಸ್ತಕಗಳನ್ನು ಪ್ರಕಟಿಸಿರುತ್ತಾರೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ ವಯೋನಿವೃತ್ತಿ ಹೊಂದಿರುವ ಅಧ್ಯಾಪಕರು ತಮಗೆ ಅಧ್ಯಯನ ವಿಭಾಗಗಳಲ್ಲಿ ಬೋಧನಾ ಕಾರ್ಯವನ್ನು ನೀಡಿ ಎಂದು ತಿಳಿಸಿರುತ್ತಾರೆ. ಯುವ ಜನಾಂಗಗಳಿಗೆ ಅವಕಾಶ ನೀಡಬೇಕಾಗಿದೆ. ಏಕೆಂದರೆ ವಯೋನಿವೃತ್ತಿ ಹೊಂದಿರುವ ಅಧ್ಯಾಪಕರುಗಳು ಮಾಸಿಕ 70,000/- ದಿಂದ 80000/- ಗಳವರೆಗೆ ಪಿಂಚಣಿಯನ್ನು ಪಡೆಯುತ್ತಿದ್ದಾರೆ. ಇವರನ್ನು ನೇಮಕ ಮಾಡಿಕೊಂಡು ಮಾಸಿಕ ರೂ.25,000/-ಗಳನ್ನು ನೀಡುವ ಬದಲು ಯುವ ಜನಾಂಗದ ಅರ್ಹ ಅಭ್ಯರ್ಥಿಯನ್ನು ನೇಮಕ ಮಾಡಿಕೊಂಡು ರೂ.10,000/- ಗಳನ್ನು ನೀಡುವುದು ಉತ್ತಮವೆಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಸಂದರ್ಶಕ ಪ್ರಾಧ್ಯಾಪಕರು ಪಿಂಚಣಿಯೊಂದಿಗೆ ರೂ.25,000/- ಗಳನ್ನು ಗೌರವಧನವನ್ನಾಗಿ ಪಡೆಯುತ್ತಿದ್ದಾರೆ. |

| | |
|---|---|
| | ಸಂದರ್ಶಕರ ಪ್ರಾಧ್ಯಾಪಕರಾಗಿ ಎಷ್ಟು ಅವಧಿಯವರೆಗೆ ಬೋಧನಾ ಕಾರ್ಯವನ್ನು ಕೈಗೊಳ್ಳುತ್ತಾರೆಂದು ಕೇಳಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ ಸಂದರ್ಶಕ ಪ್ರಾಧ್ಯಾಪಕರಿಗೆ ರೂ.25,000/- ಗಳ ಬದಲಾಗಿ ರೂ.10,000/- ಗೌರವಧನವನ್ನಾಗಿ ನಿಗದಿಗೊಳಿಸುವುದು ಸೂಕ್ತ ಎಂದು ತಿಳಿಸಿದರು. ವಯೋನಿವೃತ್ತಿ ಹೊಂದಿರುವ ಹಲವು ಅಧ್ಯಾಪಕರುಗಳು ಉಚಿತವಾಗಿ ಬೋಧನಾ ಕಾರ್ಯವನ್ನು ಕೈಗೊಳ್ಳುತ್ತೇವೆಂದು ತಮಗೆ ಮನವಿ ಮಾಡಿರುತ್ತಾರೆಂದು ಸಭೆಯ ಗಮನಕ್ಕೆ ತಂದರು.<br><br>ಡಾ. ಟಿ.ಆರ್.ಚಂದ್ರಶೇಖರ್ ಅವರು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕರಾಗಿ ಹಲವರು ಸೇವೆ ಸಲ್ಲಿಸುತ್ತಿದ್ದಾರೆ. ಯುವ ಜನಾಂಗಕ್ಕೆ ಅವಕಾಶವನ್ನು ನೀಡಿ ಎಂದು ಸಲಹೆ ನೀಡಿದರು.<br><br>ಶ್ರೀ ನಟರಾಜು ಹೆಚ್.ಎಸ್. ಅವರು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ಖಾಯಂ ಅಧ್ಯಾಪಕರನ್ನು ನೇಮಕಾತಿ ಮಾಡಿಕೊಳ್ಳಿ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಹಿಂದಿನ ಬಾರಿ ಕುಲಪತಿಯವರು ಒಬ್ಬರಿಗೆ ಒಂದು ವರ್ಷದ ಅವಧಿಗೆ ಮಾತ್ರ ನೇಮಕಾತಿ ಮಾಡಿಕೊಳ್ಳಲಾಗುವುದೆಂದು ತಿಳಿಸಿರುತ್ತೀರಿ ಎಂದು ಸಭೆಯ ಗಮನಕ್ಕೆ ತಂದರು.<br><br>ಮಾನ್ಯ ಕುಲಪತಿಯವರು ಮಾತನಾಡಿ ಇವರು ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದಿದ್ದು, ಇವರನ್ನು ಸಂದರ್ಶಕ ಪ್ರಾಧ್ಯಾಪಕರಾಗಿ ಮಾತ್ರ ನೇಮಕ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು. ಮುಂದುವರೆದು, ಮುಂದಿನ ಶೈಕ್ಷಣಿಕ ವರ್ಷದಿಂದ ಸಂದರ್ಶಕ ಪ್ರಾಧ್ಯಾಪಕರ ಗೌರವಧನವನ್ನು ರೂ.10,000/-ಗಳಿಗೆ ನಿಗದಿಪಡಿಸಲು ನಿಯಮಗಳನುಸಾರ ಕ್ರಮವಹಿಸಲಾಗುವುದೆಂದು ಸಭೆಗೆ ತಿಳಿಸಿದರು. |
| **ತೀರ್ಮಾನ** | ಮಾನ್ಯ ಕುಲಪತಿಗಳ ಆದೇಶದಂತೆ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ ಡಾ. ಎಸ್. ಮಸೂದ್ ಸಿರಾಜ್, ನಿವೃತ್ತ ಪ್ರಾಧ್ಯಾಪಕರು, ಉರ್ದು ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು 2023-24ನೇ ಶೈಕ್ಷಣಿಕ ಸಾಲಿಗೆ ಮಾತ್ರ ಸೀಮಿತಗೊಂಡಂತೆ ಉರ್ದು ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. ಹಾಗೂ ಮುಂದಿನ ಶೈಕ್ಷಣಿಕ ವರ್ಷದಿಂದ ಸಂದರ್ಶಕ ಪ್ರಾಧ್ಯಾಪಕರ ಗೌರವಧನವನ್ನು ರೂ. 25,000/-ಗಳಿಗೆ ಬದಲಾಗಿ ರೂ.10,000/-ಗಳನ್ನು ನಿಗದಿಪಡಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2024/2.10** | ಮೆ. : ವೆಂಕಟೇಶ್ವರ ಎಂಟರ್‌ಪ್ರೈಸಸ್, ಬೆಂಗಳೂರು ಇವರಿಗೆ ಕನ್ನಡ ವಿಷಯ ವಿಶ್ವಕೋಶ 08 ಮತ್ತು 09ನೇ ಸಂಪುಟಗಳನ್ನು ಮುದ್ರಣ ಮಾಡಿರುವುದಕ್ಕೆ ಹಣ ಸಂದಾಯ ಮಾಡುವ ಬಗ್ಗೆ. |
| **ತೀರ್ಮಾನ** | ಕುಲಸಚಿವರು ಮಾತನಾಡಿ, ಮೆ: ವೆಂಕಟೇಶ್ವರ ಎಂಟರ್‌ಪ್ರೈಸಸ್, ಬೆಂಗಳೂರು ಇವರಿಗೆ ಟೆಂಡರ್ ಮಾಡಿ ಕಾರ್ಯಾದೇಶವನ್ನು ಜನವರಿ 2020ರಲ್ಲಿ ನಿಯಮಾನುಸಾರ ನೀಡಿದೆ. ಮುದ್ರಣ ಮಾಡುವ ಬದಲು ಫೆಬ್ರವರಿ/ಮಾರ್ಚ್ 2021 ರಲ್ಲಿ ಕೆಲವು ಸಂಪುಟಗಳನ್ನು ಮುದ್ರಿಸಿ ಸರಬರಾಜು ಮಾಡಿರುತ್ತಾರೆ. ಅಂತಿಮವಾಗಿ ದಿನಾಂಕ: 11-10-2022 ರಂದು ಹುಂಡಿಗಳನ್ನು ಪಾವತಿಗಾಗಿ ಸಲ್ಲಿಸಿರುತ್ತಾರೆ. ವಾಸ್ತವವಾಗಿ ಕಾರ್ಯಾದೇಶ ನೀಡಿದ್ದ 30 ದಿನಗಳೊಳಗೆ ಮುದ್ರಣ ಮಾಡಿ ಸರಬರಾಜು ಮಾಡಬೇಕಿತ್ತು. ಆದರೆ ಕೋವಿಡ್ ಲಾಕ್‌ಡೌನ್ ಮುಗಿದ ನಂತರದಲ್ಲಿ ಸಂಪುಟಗಳನ್ನು ಸರಬರಾಜು ಮಾಡಲು 11 ತಿಂಗಳುಗಳ ಕಾಲಾವಕಾಶವನ್ನು ತೆಗೆದುಕೊಂಡಿದ್ದರಿಂದ ಸದರಿ ಸಂಸ್ಥೆಯವರಿಗೆ ಹುಂಡಿಗಳನ್ನು ಪಾವತಿಸಿದಲ್ಲಿ ಲೆಕ್ಕಪರಿಶೋಧಕರಿಂದ ಆಡಿಟ್ ಆಕ್ಷೇಪಣೆಯಾಗಬಹುದೆಂದು ಕಾನೂನು ಸಲಹೆಗಾರರ ಅಭಿಪ್ರಾಯವನ್ನು ಪಡೆಯಲಾಗಿತ್ತು. 2020ರಲ್ಲಿ ಆದ ಕರಾರಿನಂತೆ ಅದೇ |

| | |
|---|---|
| | ಮೊತ್ತಕ್ಕೆ ಹುಂಡಿಯನ್ನು ಸಲ್ಲಿಸಲಾಗಿರುತ್ತದೆ (ದರ ಪರಿಷ್ಕರಣೆ ಮಾಡಿರುವುದಿಲ್ಲ). ಆದ್ದರಿಂದ 'ವಿಳಂಬ ಮನ್ನಾ ಮಾಡಿ' ಪಾವತಿಗೆ ಅಂಗೀಕರಿಸಬಹುದೆಂದು ಕಾನೂನು ಸಲಹೆಗಾರರು ಅಭಿಪ್ರಾಯಿಸಿರುತ್ತಾರೆ. ನಮ್ಮಲ್ಲಿ 70000 ಪ್ರತಿಗಳಿದ್ದು, ಗುತ್ತಿಗೆದಾರರು ಒಟ್ಟು ರೂ.29,90,000/-ಗಳ ಹುಂಡಿಯನ್ನು ಕಳುಹಿಸಿರುತ್ತಾರೆಂದು ತಿಳಿಸಿದರು.<br><br>ಡಾ. ಟಿ.ಆರ್.ಚಂದ್ರಶೇಖರ್ ಮಾತನಾಡಿ, ಕಳೆದ ಎರಡು ಸಿಂಡಿಕೇಟ್ ಸಭೆಯಲ್ಲಿ ಈ ವಿಷಯವನ್ನು ಮಂಡಿಸಲಾಗಿತ್ತು. ಯಾವ ಕಾರಣದಿಂದ ಮುಂದೂಡಲಾಯಿತು ಎಂದು ಕೇಳಿದರು.<br><br>ಕುಲಪತಿಗಳು ಮಾತನಾಡಿ, ವಿವಿ ಮುದ್ರಣಾಲಯ/ಪ್ರಸಾರಾಂಗ/ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರುಗಳೊಂದಿಗೆ ಸಭೆ ನಡೆಸಿ ಅವರುಗಳ ಅಭಿಪ್ರಾಯವನ್ನು ಪಡೆಯಬೇಕಿತ್ತು. ವಿಶ್ವವಿದ್ಯಾನಿಲಯಕ್ಕೆ ಅವಶ್ಯಕತೆಯಿರುವುದು 5000 ಪ್ರತಿಗಳು ಮಾತ್ರ. ಆದರೆ, 70000 ಪ್ರತಿಗಳನ್ನು ಮುದ್ರಿಸಿರುತ್ತಾರೆ. ಈ ಪ್ರತಿಗಳು ಮಾರಾಟವಾಗುವುದು ಸಹ ಕಷ್ಟವಾಗಿರುತ್ತದೆ. ಪ್ರತಿಗಳು ಮಾರಾಟವಾದ ನಂತರ ಮುದ್ರಣ ಮಾಡುವುದು ಸೂಕ್ತ. ಪ್ರಸ್ತುತ ಉಗ್ರಾಣದಲ್ಲಿ ಸಾವಿರಾರು ಪುಸ್ತಕಗಳಿವೆ. ಇವುಗಳು ಮಾರಾಟವಾಗದಿರುವುದೇ ಸಮಸ್ಯೆಯಾಗಿದೆ. ಸಾಂಕೇತಿಕವಾಗಿ ಮುದ್ರಣ ಮಾಡಲೇಬೇಕೆಂದರು.<br><br>ಶ್ರೀ ನಟರಾಜು .ಹೆಚ್.ಎಸ್. ಅವರು ಮಾತನಾಡಿ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಮುದ್ರಣಾಲಯ ಇರಬೇಕಾದರೆ ಬೇರೆ ಕಡೆ ಏಕೆ ಮುದ್ರಣ ಮಾಡಿಸಬೇಕು? ಮುದ್ರಣವಾಗಿರುವ ಪ್ರತಿಗಳಿಗೆ ಒಟ್ಟು ರೂ.29,90,000/-ಗಳಾಗಿದ್ದು, ಇದರಿಂದ ವಿಶ್ವವಿದ್ಯಾನಿಲಯಕ್ಕೆ ದೊರಕುವ ಆದಾಯದ ಮೊತ್ತವೆಷ್ಟು ಎಂದು ಕೇಳಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಸುಮಾರು ಪುಸ್ತಕಗಳು ಮಾರಾಟವಾಗದೇ ಉಗ್ರಾಣದಲ್ಲಿರುವುದು ಕಂಡು ಬಂದಿದೆ. ಯಾವುದೇ ಕಾರಣಕ್ಕೂ ಇನ್ನು ಮುಂದೆ ಹೊರಗುತ್ತಿಗೆಯಲ್ಲಿ ಮುದ್ರಣ ಮಾಡಿಸುವ ಬದಲು ವಿಶ್ವವಿದ್ಯಾನಿಲಯದಲ್ಲಿಯೇ ಮುದ್ರಣ ಮಾಡುವುದು. ಅನಿವಾರ್ಯ ಸಂದರ್ಭದಲ್ಲಿ ಸೀಮಿತ ಪ್ರತಿಗಳನ್ನು ಮುದ್ರಿಸಬಹುದು. ಆ ಪ್ರತಿಗಳು ಮಾರಾಟವಾದ ನಂತರವೇ ಟೆಂಡರ್ ನೀಡುವುದು ಸೂಕ್ತ. 5000 ಪ್ರತಿಗಳ ಮುದ್ರಣಕ್ಕೂ ಟೆಂಡರ್ ತೆಗೆದುಕೊಳ್ಳುವವರಿದ್ದಾರೆ ಎಂದು ಸಲಹೆ ನೀಡಿದರು.<br><br>ಡಾ. ಬಸವರಾಜು ಸಿ. ಅವರು ಮಾತನಾಡಿ, ವಿವಿ ಮುದ್ರಣಾಲಯ ಮತ್ತು ಪ್ರಸಾರಾಂಗದಲ್ಲಿ ಮುಖ್ಯವಾಗಿ ಆಂತರಿಕ ಸಮಸ್ಯೆಗಳಿದ್ದು, ಈ ಕಾರಣದಿಂದ ಬೆಂಗಳೂರಿನ ಟೆಂಡರ್‌ರವರಿಂದ ಮುದ್ರಣ ಮಾಡಿಸುವಂತಾಗಿದೆ. ಇದರಿಂದ ವಿಶ್ವವಿದ್ಯಾನಿಲಯದ ಹಣ ವ್ಯಯವಾಗುತ್ತಿದೆ. ಈಗಾಗಲೇ 6 ಮತ್ತು 7 ಸಂಪುಟಗಳು ಕಾರ್ಯಾದೇಶದಲ್ಲಿ ತಿಳಿಸಿರುವಷ್ಟು ಮುದ್ರಣವಾಗಿ ಪ್ರಸಾರಾಂಗದಲ್ಲಿರುತ್ತದೆ. ಕನ್ನಡ ವಿಶ್ವಕೋಶವನ್ನು ಮುದ್ರಣ ಮಾಡಿಸುವುದು ವಿಶ್ವವಿದ್ಯಾನಿಲಯಕ್ಕೆ ಹೆಮ್ಮೆಯ ವಿಷಯವಾಗಿದೆ. ಮುದ್ರಣ ಮಾಡಿಸುವುದು ಸರಿ. ಆದರೆ ಅಗತ್ಯಕ್ಕಿಂತ ಹೆಚ್ಚಾಗಿ ಮುದ್ರಣ ಮಾಡಿಸಬಾರದು ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಆಡಿಟ್‌ರವರು ವಿವಿ ಮುದ್ರಣಾಲಯ ಹಾಗೂ ಮಾರುಕಟ್ಟೆ ದರವನ್ನು ತುಲನೆ ಮಾಡುತ್ತಾರೆ. ಆ ಸಂದರ್ಭದಲ್ಲಿ ಮಾರುಕಟ್ಟೆ ದರವು ಕಡಿಮೆಯಿದ್ದಾಗ, ಅಲ್ಲಿಯೇ ಮುದ್ರಣ ಮಾಡಿಸಿಕೊಳ್ಳಬೇಕೆಂದು ತಿಳಿಸಿರುತ್ತಾರೆ. ಇಲ್ಲವಾದಲ್ಲಿ ಆಕ್ಷೇಪಣೆಯಲ್ಲಿಡುವ ಸಂಭವವಿರುವುದರಿಂದ ಟೆಂಡರ್ ಮುಖಾಂತರ ಮುದ್ರಣ ಮಾಡಿಸಲಾಗುತ್ತಿದೆಯೆಂದು ಸ್ಪಷ್ಟನೆ ನೀಡಿದರು. ಸದ್ಯಕ್ಕೆ ವಿವಿ ಮುದ್ರಣಾಲಯದಲ್ಲಿ ಸಾಂಕೇತಿಕವಾಗಿ ಮಾತ್ರ ಮುದ್ರಣ ಮಾಡಿಸುವುದನ್ನು ಹೊರತುಪಡಿಸಿದರೆ, ಉಗ್ರಾಣದಲ್ಲಿರುವ ಪುಸ್ತಕಗಳು ಮತ್ತು ಪ್ರತಿಗಳು ಮಾರಾಟವಾಗುವವರೆಗೆ ಯಾವುದೇ ಮುದ್ರಣ ಮಾಡಿಸುವುದಿಲ್ಲವೆಂದರು. ಇದು ಹಳೆಯ ಹುಂಡಿಯಾಗಿದೆ ಮತ್ತು ಕಾನೂನು ಸಲಹೆಗಾರರು |

| | |
|---|---|
| | 'ವಿಳಂಬ ಮನ್ನಾ ಮಾಡಿ' ಪಾವತಿಗೆ ಅಂಗೀಕರಿಸಬಹುದೆಂದು ಸಹ ಅಭಿಪ್ರಾಯಿಸಿರುತ್ತಾರೆ ಎಂದು ತಿಳಿಸಿದರು.<br><br>ಶ್ರೀ ನಟರಾಜು ಹೆಚ್.ಎಸ್. ಅವರು ಮಾತನಾಡಿ ವಿಳಂಬ ಮಾಡಿರುವುದಕ್ಕೆ ದಂಡ ವಿಧಿಸಬಹುದಲ್ಲವೇ ಎಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ದಂಡ ವಿಧಿಸಲಾಗುವುದು ಎಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ವಾಸ್ತವವಾಗಿ ಶೇ.10-20 ರಷ್ಟು ದಂಡದ ಮೊತ್ತವನ್ನು ಕಡಿತಗೊಳಿಸಿಕೊಂಡು ಹುಂಡಿಯನ್ನು ಪಾವತಿಸಬಹುದೇ ಎಂದರು.<br><br>ಡಾ. ಬಸವರಾಜು ಸಿ. ಅವರು ಮಾತನಾಡಿ ಈ ರೀತಿಯ ನಿರ್ಣಯವನ್ನು ತೆಗೆದುಕೊಳ್ಳದಿದ್ದರೆ ಸಮಸ್ಯೆ ಬಗೆಹರಿಯುವುದಿಲ್ಲವೆಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಸದ್ಯದಲ್ಲಿ ವಿಶ್ವವಿದ್ಯಾನಿಲಯವು ಆರ್ಥಿಕ ಸಂಕಷ್ಟದಲ್ಲಿದ್ದು, ಕೂಡಲೇ ಹುಂಡಿಯನ್ನು ಪಾವತಿಸಲು ತಡವಾಗಬಹುದು. ಮಾರ್ಚ್ 31, 2024ರ ನಂತರ ಕ್ರಮಕೈಗೊಳ್ಳಲಾಗುವುದು ಎಂದರು.<br><br>ಕುಲಸಚಿವರು ಮಾತನಾಡಿ ಪುಸ್ತಕಗಳು ಹಾಗೂ ಸಂಪುಟಗಳ ಪ್ರತಿಗಳಿಗೆ ಶೇ.50 ರಷ್ಟು ರಿಯಾಯಿತಿ ನೀಡಿದ್ದರೂ ಮಾರಾಟವಾಗುವುದು ಕಷ್ಟವಾಗಿದೆ ಎಂದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ ಆನ್‌ಲೈನ್ ವ್ಯಾಪಾರಕ್ಕೆ ಸಪ್ನ ಬುಕ್ ಹೌಸ್ ಸಹಯೋಗದೊಂದಿಗೆ ಮಾರಾಟ ಮಾಡುವುದು ಉತ್ತಮವೆನಿಸುತ್ತದೆ. ಏಕೆಂದರೆ ಇಂದಿನ ದಿನದಲ್ಲಿ ಆನ್‌ಲೈನ್ ಮುಖಾಂತರ ಪುಸ್ತಕಗಳನ್ನು ಖರೀದಿ ಮಾಡುವುದು ಹೆಚ್ಚಾಗಿದೆಯೆಂದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಪ್ರಸಾರಾಂಗವು ಇಷ್ಟೊಂದು ಪ್ರತಿಗಳನ್ನು ಮುದ್ರಣ ಮಾಡುವ ಮುನ್ನ ಅನುಮತಿ ಪಡೆಯುವುದಿಲ್ಲವೇ ಎಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಹಿಂದೆ ಈ ರೀತಿಯಾಗಿ ಹೆಚ್ಚು ಮುದ್ರಣವಾಗಿರುತ್ತದೆ. ಪ್ರಸ್ತುತ streamline ಮಾಡಲಾಗಿದ್ದು, ಮುಂದಿನ ದಿನಗಳಲ್ಲಿ ಯಾವುದೇ ಪುಸ್ತಕಗಳನ್ನು ಮುದ್ರಣ ಮಾಡುವ ಮೊದಲು ಅನುಮತಿ ಪಡೆಯಬೇಕೆಂದು ಸಭೆಯಲ್ಲಿ ತಿಳಿಸಲಾಗಿದೆ. ಆದ್ದರಿಂದ ವಿಳಂಬಕ್ಕೆ ದಂಡ ವಿಧಿಸಿ ಹುಂಡಿಯನ್ನು ಪಾಸು ಮಾಡುವುದು ಸೂಕ್ತವೆನಿಸುತ್ತದೆ ಎಂದರು.<br><br>ಕುಲಸಚಿವರು ಮಾತನಾಡಿ ಮೆ: ವೆಂಕಟೇಶ್ವರ ಎಂಟರ್‌ಪ್ರೈಸಸ್, ಬೆಂಗಳೂರು ಇವರು ಈಗಾಗಲೇ ಪಾವತಿಸಿರುವ ಇಎಂಡಿ ಮೊತ್ತವನ್ನು ಮುಟ್ಟುಗೋಲು ಮಾಡಿಕೊಳ್ಳಬಹುದೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. |
| **ತೀರ್ಮಾನ** | ಮೆ. : ವೆಂಕಟೇಶ್ವರ ಎಂಟರ್‌ಪ್ರೈಸಸ್, ಬೆಂಗಳೂರು ಇವರಿಗೆ ಕನ್ನಡ ವಿಷಯ ವಿಶ್ವಕೋಶ 08 ಮತ್ತು 09ನೇ ಸಂಪುಟಗಳನ್ನು ವಿಳಂಬವಾಗಿ ಮುದ್ರಣ ಮಾಡಿರುವುದಕ್ಕೆ ಎಷ್ಟು ದಂಡ ವಿಧಿಸಬೇಕೆನ್ನುವ ವಿವೇಚನಾಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಮತ್ತು ತದನಂತರ ಹುಂಡಿಯನ್ನು ಪಾವತಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2024/2.11** | ವಿಶ್ವವಿದ್ಯಾನಿಲಯದ ಈಜುಕೊಳದ ಪ್ರವೇಶ ದರವನ್ನು ಪರಿಷ್ಕರಿಸುವ ಬಗ್ಗೆ. |
| | ಕುಲಸಚಿವರು ಮಾತನಾಡಿ ಈಜುಕೊಳದ ಖರ್ಚು-ವೆಚ್ಚಗಳು ಬಹಳಷ್ಟಿದೆ. ಅಂದರೆ ನಿರ್ವಹಣಾ ವೆಚ್ಚ, ಸಿಬ್ಬಂದಿಗಳ ವೇತನ ಇವೆಲ್ಲದ್ದಕ್ಕೂ ಪೂರಕವಾಗಿ ಪ್ರವೇಶ ದರವನ್ನು ಪರಿಷ್ಕರಿಸಲಾಗಿದೆ. ಈಗಾಗಲೇ ಕ್ರೀಡಾ ಸಮಿತಿ ಸಭೆಯು ಅಂಗೀಕರಿಸಿದೆ ಹಾಗೂ ಇದರೊಂದಿಗೆ ಈಜುಕೊಳದ ರಜಾ ದಿನವನ್ನು ಬದಲಾವಣೆ ಮಾಡಲಾಗಿದೆ. ಭಾನುವಾರದಂದು ಸುಮಾರು ಮಂದಿ ಬರುವುದರಿಂದ, ಭಾನುವಾರದಂದು ಕಾರ್ಯ |

| | |
|---|---|
| | ದಿನವನ್ನಾಗಿ ಮಾಡಿ, ಇದರ ಬದಲು ಬೇರೆ ದಿನ ರಜಾ ದಿನವೆಂದು ಪರಿಗಣಿಸಬೇಕೆಂದು ಹಿಂದಿನ ಸಭೆಯಲ್ಲಿ ಸಿಂಡಿಕೇಟ್ ಸದಸ್ಯರುಗಳು, ವಿವಿ ಉದ್ಯೋಗಿಗಳು ಮತ್ತು ಸಾರ್ವಜನಿಕರು ಪ್ರಸ್ತಾಪಿಸಿದರು. ಈ ಸಂಬಂಧ ಭಾನುವಾರದ ರಜಾ ದಿನವನ್ನು ಸೋಮವಾರಕ್ಕೆ ಬದಲಾವಣೆ ಮಾಡಲಾಗಿದೆ. ಹಾಗೆಯೇ ಎರಡನೇ ಮತ್ತು ನಾಲ್ಕನೇ ಶನಿವಾರದಂದು ಈಜುಕೊಳದಲ್ಲಿ ಕಾರ್ಯನಿರ್ವಹಿಸುವ ಉದ್ಯೋಗಿಗಳಿಗೆ ಬದಲಿ ರಜೆಯನ್ನು ಮಂಜೂರು ಮಾಡಲು ನಿರ್ಧರಿಸಲಾಗಿದೆ ಎಂದರು.<br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಈಜುಕೊಳದ ಪರಿಷ್ಕೃತ ಪ್ರವೇಶ ದರವು 365 ದಿನಗಳಿಗೂ ಅನ್ವಯಿಸುತ್ತದೆಯೇ, ಬೇಸಿಗೆ ಕಾಲದಲ್ಲಿ ಬೇಡಿಕೆಯಿರುವುದು ಸಹಜ. ಬೇಸಿಗೆ ಕಾಲವನ್ನು ಹೊರತುಪಡಿಸಿ, ಇನ್ನುಳಿದ ಕಾಲಗಳಲ್ಲಿ ಸ್ವಲ್ಪಮಟ್ಟಿಗೆ ಕಡಿಮೆ ದರವನ್ನು ನಿಗದಿಪಡಿಸಬಹುದಲ್ಲವೇ ಎಂದು ಕೇಳಿದರು.<br>ಡಾ. ಬಸವರಾಜು .ಸಿ ಅವರು ಮಾತನಾಡಿ ಈಜುಕೊಳದ ಪ್ರವೇಶ ದರವನ್ನು ಶೇ.10 ರಷ್ಟು ಮಾತ್ರ ಪರಿಷ್ಕರಿಸಿರುವುದರಿಂದ ಯಾರಿಗೂ ಹೆಚ್ಚಿನ ಹೊರೆಯಾಗುವುದಿಲ್ಲ ಎಂದರು.<br>ಕುಲಸಚಿವರು ಮಾತನಾಡಿ ಮಹಾರಾಜರ ಕಾಲದಲ್ಲಿ ಈಜುಕೊಳವನ್ನು ಸ್ಥಾಪಿಸಿರುವುದರಿಂದ ಎಲ್ಲಾ ರೀತಿಯ ಸೌಕರ್ಯಗಳನ್ನು ಒದಗಿಸಲಾಗಿದೆ. ಕಾವೇರಿ ನೀರಿನ ಈಜುಕೊಳವಿರುವುದು ನಮ್ಮ ವಿಶ್ವವಿದ್ಯಾನಿಲಯದಲ್ಲಿ ಮಾತ್ರ ಹಾಗೂ ಬೇಸಿಗೆ ಕಾಲವಲ್ಲದೇ ಎಲ್ಲಾ ಕಾಲದಲ್ಲಿಯೂ ಬೇಡಿಕೆಯಿರುವುದರಿಂದಲೇ ಶೇ.10 ರಷ್ಟು ಮಾತ್ರ ಹೆಚ್ಚಿಸಲಾಗಿದೆಯೆಂದರು. |
| **ತೀರ್ಮಾನ** | **ವಿಶ್ವವಿದ್ಯಾನಿಲಯದ ಈಜುಕೊಳದ ಹಾಲಿಯಿರುವ ಪ್ರವೇಶ ದರಗಳನ್ನು ಹಾಗೂ ವೇಳಾಪಟ್ಟಿಯನ್ನು ಪರಿಷ್ಕರಿಸಲು ಸಿಂಡಿಕೇಟ್ ಸಭೆಯು ಅನುಮತಿಸಿತು.** |
| **ಸಾಮಾನ್ಯ ಸಭೆ 2024/2.12** | 2023-24ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬನ್ನಿಮಂಟಪದಲ್ಲಿರುವ ಸೆಂಟ್ ಫಿಲೋಮಿನಾಸ್ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ. |
| **ತೀರ್ಮಾನ** | **2023-24ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬನ್ನಿಮಂಟಪದಲ್ಲಿರುವ ಸೆಂಟ್ ಫಿಲೋಮಿನಾಸ್ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| **ಸಾಮಾನ್ಯ ಸಭೆ 2024/2.13** | 2023-24ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆಎಸ್ಎಸ್ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ. |
| **ತೀರ್ಮಾನ** | **2023-24ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆಎಸ್ಎಸ್ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| **ಸಾಮಾನ್ಯ ಸಭೆ 2024/2.14** | 2023-24ನೇ ಶೈಕ್ಷಣಿಕ ಸಾಲಿನ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್ಎಸ್ ಮಹಿಳಾ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ. |
| **ತೀರ್ಮಾನ** | **2023-24ನೇ ಶೈಕ್ಷಣಿಕ ಸಾಲಿನ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್ಎಸ್ ಮಹಿಳಾ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| **ಸಾಮಾನ್ಯ ಸಭೆ 2024/2.15** | 2023-24ನೇ ಶೈಕ್ಷಣಿಕ ಸಾಲಿನ ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ. |

| | |
|---|---|
| ತೀರ್ಮಾನ | **2023-24ನೇ ಶೈಕ್ಷಣಿಕ ಸಾಲಿನ ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2024/2.16 | 2023-24ನೇ ಶೈಕ್ಷಣಿಕ ಸಾಲಿನ ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ. |
| ತೀರ್ಮಾನ | **2023-24ನೇ ಶೈಕ್ಷಣಿಕ ಸಾಲಿನ ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2024/2.17 | ಕು. ಕುಸುಮ ಎ., ಸಂಸ್ಕೃತ ಅಧ್ಯಯನ ವಿಭಾಗದ ಹಳೆಯ ವಿದ್ಯಾರ್ಥಿ, ಮಾನಸಗಂಗೋತ್ರಿ, ಮೈಸೂರು ಇವರು ವಿಶ್ವವಿದ್ಯಾನಿಲಯಕ್ಕೆ ನೀಡಿರುವ ದೂರಿನ ಕುರಿತು ವಿಚಾರಣೆ ನಡೆಸಿರುವ ವರದಿ ಬಗ್ಗೆ. |
| | ಕುಲಸಚಿವ (ಪರೀಕ್ಷಾಂಗ) ರವರು ಕು. ಕುಸುಮ ಎ., ಸಂಸ್ಕೃತ ಅಧ್ಯಯನ ವಿಭಾಗದ ಹಳೆಯ ವಿದ್ಯಾರ್ಥಿ, ಇವರು ವಿಶ್ವವಿದ್ಯಾನಿಲಯಕ್ಕೆ ನೀಡಿರುವ ದೂರಿನ ಕುರಿತು ಸಭೆಯಲ್ಲಿ ಮಂಡಿಸಿದರು.<br><br>ಕು. ಕುಸುಮ ರವರು 2015-17ನೇ ಸಾಲಿನಲ್ಲಿ ಸಂಸ್ಕೃತ ಅಧ್ಯಯನ ವಿಭಾಗದಲ್ಲಿ ವಿದ್ಯಾರ್ಥಿಗಳ ಹಾಜರಾತಿಯ ಬಗ್ಗೆ ಅಕ್ರಮ ನಡೆದಿದೆ ಎಂದು ಆರೋಪಿಸಿ ಘನ ಉಚ್ಚನ್ಯಾಯಾಲಯದಲ್ಲಿ ದಾವೆ ಹೂಡಿದ್ದ ಸಂಬಂಧ ಉಚ್ಚನ್ಯಾಯಾಲಯವು ಕೂಲಂಕಷವಾಗಿ ತನಿಖೆ ನಡೆಸಿ ವರದಿ ನೀಡುವಂತೆ ಸೂಚಿಸಿತ್ತು. ಉಚ್ಚನ್ಯಾಯಾಲಯದ ಆದೇಶದ ಮೇರೆಗೆ ವಿಶ್ವವಿದ್ಯಾನಿಲಯದಿಂದ ಒಂದು ಸಮಿತಿಯನ್ನು ರಚಿಸಲಾಯಿತು. ಸದರಿ ಸಮಿತಿಯು ದಿನಾಂಕ 22.11.2021 ರಂದು ಸಭೆಯನ್ನು ನಡೆಸಿ ವರದಿಯನ್ನು ಸಿದ್ಧಪಡಿಸಿತ್ತು. ಸದರಿ ಸಮಿತಿಯ ವರದಿಯನ್ನು ದಿನಾಂಕ : 26.11.2021 ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿತ್ತು. ವರದಿಯನ್ನು WPC ವಿಭಾಗಕ್ಕೆ ಕಳುಹಿಸಿ ಕಾನೂನು ಸಲಹೆಗಾರರ ಸಲಹೆ ಪಡೆದು ಮರು ಮಂಡಿಸಲು ಆದೇಶಿಸಿತ್ತು. ಈ ಮಧ್ಯೆ ಕರ್ನಾಟಕ ಘನ ಉಚ್ಚ ನ್ಯಾಯಾಲಯದಲ್ಲಿ ಕು. ಕುಸುಮ ಎ., ಹೂಡಿದ ದಾವೆ ಕುರಿತು ಪ್ರಕರಣವನ್ನು ಮುಕ್ತಾಯಗೊಳಿಸಿ ಸಮಿತಿ ನೀಡಿರುವ ವರದಿಯನ್ನು ಸಿಂಡಿಕೇಟ್ ಸಭೆಯಲ್ಲಿ ನಿರ್ಣಯ ಕೈಗೊಂಡು ಕು. ಎ. ಕುಸುಮ ರವರ ಗಮನಕ್ಕೆ ತರುವುದು ಎಂದು ಆದೇಶಿಸಿದೆ ಎಂಬ ಅಂಶವನ್ನು ಸಿಂಡಿಕೇಟ್ ಸಭೆಯ ಗಮನಕ್ಕೆ ತಂದು, ವಿಚಾರಣ ಸಮಿತಿಯು ಸಲ್ಲಿಸಿರುವ ವರದಿಯನ್ನು ಸಭೆಗೆ ಮಂಡಿಸಿದರು. |
| ತೀರ್ಮಾನ | **ಕು. ಕುಸುಮ ಎ., ಸಂಸ್ಕೃತ ಅಧ್ಯಯನ ವಿಭಾಗದ ಹಳೆಯ ವಿದ್ಯಾರ್ಥಿ, ಮಾನಸಗಂಗೋತ್ರಿ, ಮೈಸೂರು ಇವರು ವಿಶ್ವವಿದ್ಯಾನಿಲಯಕ್ಕೆ ನೀಡಿರುವ ದೂರಿನ ಸಂಬಂಧ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಅಂಗೀಕರಿಸಿತು ಹಾಗೂ ವರದಿಯಲ್ಲಿನ ಅಂಶದಂತೆ ಕ್ರಮವಹಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2024/2.18 | ಶ್ರೀ ಶಿವಕುಮಾರ್ ಜೆ., ಪ್ರಥಮ ದರ್ಜೆ ಸಹಾಯಕ, ಯುವರಾಜ ಕಾಲೇಜು, ಮೈಸೂರು ಇವರು ಕಾಲೇಜಿನ ಆವರಣದಲ್ಲಿ ಆತ್ಮಹತ್ಯೆಗೆ ಪ್ರಯತ್ನಿಸಿರುವ ಪ್ರಕರಣದ ಬಗೆಗೆ. |
| ಅ) | ಪ್ರಾಂಶುಪಾಲರು, ಯುವರಾಜ ಕಾಲೇಜು, ಮೈಸೂರು ಅವರಿಂದ ಪಡೆದು ಕ್ರೋಢಿಕರಿಸಲಾದ ಮಾಹಿತಿಗಳೊಂದಿಗೆ ಸಿದ್ಧಪಡಿಸಲಾಗಿರುವ ಆರೋಪಣಾ ಹಾಗೂ ದೋಷಾರೋಪಣಾ ಪಟ್ಟಿಯನ್ನು ಅನುಮೋದಿಸುವುದರ ಬಗ್ಗೆ. |

| | |
|---|---|
| ತೀರ್ಮಾನ | **ಪ್ರಾಂಶುಪಾಲರು, ಯುವರಾಜ ಕಾಲೇಜು, ಮೈಸೂರು ಅವರಿಂದ ಪಡೆದು ಕ್ರೋಢೀಕರಿಸಲಾದ ಮಾಹಿತಿಗಳೊಂದಿಗೆ ಸಿದ್ಧಪಡಿಸಲಾಗಿರುವ ಆರೋಪಣಾ ಹಾಗೂ ದೋಷಾರೋಪಣಾ ಪಟ್ಟಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಆ) | ಸಿಂಡಿಕೇಟ್ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ ವಿಶ್ವವಿದ್ಯಾನಿಲಯದ ವತಿಯಿಂದ ಕೈಗೊಳ್ಳಲಾಗಿರುವ ಕ್ರಮದ ಬಗ್ಗೆ ಸಿಂಡಿಕೇಟ್ ಸಭೆಯ ಅನುಸಮರ್ಥನೆ ಪಡೆಯುವುದರ ಬಗ್ಗೆ. |
| ತೀರ್ಮಾನ | **ಉಚ್ಚ ನ್ಯಾಯಾಲಯದ ತೀರ್ಪಿನನ್ವಯ ಡಾ. ಹೆಚ್.ಸಿ. ದೇವರಾಜೇಗೌಡ ಇವರ ವಿರುದ್ಧ ಇಲಾಖಾ ವಿಚಾರಣೆಯ ಸಂಬಂಧ ಕಡ್ಡಾಯವಾಗಿ ರಜೆಯ ಮೇಲೆ ತೆರಳುವಂತೆ ಹೊರಡಿಸಿದ್ದ ವಿಶ್ವವಿದ್ಯಾನಿಲಯದ ಆದೇಶವನ್ನು ಭಾಗಶಃ ಮಾರ್ಪಡಿಸಿ ಡಾ. ಹೆಚ್.ಸಿ. ದೇವರಾಜೇಗೌಡ ಇವರನ್ನು ಈ ತಕ್ಷಣದಿಂದ ಜಾರಿಗೆ ಬಂದಂತೆ ಯುವರಾಜ ಕಾಲೇಜಿನ ಭೌತಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಂಡು ಕಾರ್ಯನಿರ್ವಹಿಸಲು ಆದೇಶಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ<br>2024/2.19 | ಡಾ. ಸರಳ ಕೆ.ಎಸ್., ಪ್ರಾಧ್ಯಾಪಕರು, ಕುವೆಂಪು ವಿಶ್ವವಿದ್ಯಾನಿಲಯ ಇವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅಂತರ ವಿಶ್ವವಿದ್ಯಾನಿಲಯ ವರ್ಗಾವಣೆಯನ್ನು ಕೋರಿರುವ ಬಗ್ಗೆ. |
| | ಕುಲಸಚಿವರು ಮಾತನಾಡಿ ಡಾ. ಸರಳ ಕೆ.ಎಸ್., ಪ್ರಾಧ್ಯಾಪಕರು, ಕುವೆಂಪು ವಿಶ್ವವಿದ್ಯಾನಿಲಯ ಇವರು ವಿಶ್ವವಿದ್ಯಾನಿಲಯಕ್ಕೆ ಅಂತರ ವಿಶ್ವವಿದ್ಯಾನಿಲಯ ವರ್ಗಾವಣೆಯನ್ನು ಕೋರಿರುತ್ತಾರೆ. ಆದರೆ ಹಿಂದಿನ ಸಿಂಡಿಕೇಟ್‌ನಲ್ಲೂ ಸಹ ಈ ತೆರನಾದ ವರ್ಗಾವಣೆಯನ್ನು ಕೋರಿದಾಗ ಹುದ್ದೆಯೊಂದಿಗೆ ಬರುವುದಾದರೆ ವಿಶ್ವವಿದ್ಯಾನಿಲಯವು ಒಪ್ಪುವುದು ಎಂದು ತಿಳಿಸಲಾಗಿರುತ್ತದೆ. ಘಟಕ ಕಾಲೇಜುಗಳಾದ ಮಹಾರಾಜ ಕಾಲೇಜು ಹಾಗೂ ಯುವರಾಜ ಕಾಲೇಜುಗಳಲ್ಲಿ ಇರುವಂತಹವರು ಸಹಾಯಕ ಪ್ರಾಧ್ಯಾಪಕರುಗಳು. ಮುಂಬಡ್ತಿ ದೊರೆತ ನಂತರ ಸಹ ಪ್ರಾಧ್ಯಾಪಕರುಗಳಾಗಿದ್ದಾರೆ. ಜೊತೆಗೆ ನಮ್ಮ ಸ್ನಾತಕೋತ್ತರ ಕೇಂದ್ರಗಳು ವಿಶ್ವವಿದ್ಯಾನಿಲಯವಾಗಿ ವಿಭಜನೆಗೊಂಡಿದ್ದರಿಂದ ನಮ್ಮಲ್ಲಿದ್ದ 664 ಖಾಯಂ ಹುದ್ದೆಗಳಲ್ಲಿ 290 ಹುದ್ದೆಗಳು ಕಡಿಮೆಯಾಗಿವೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಅಂತರ ವಿಶ್ವವಿದ್ಯಾನಿಲಯ ವರ್ಗಾವಣೆಯನ್ನು ಕೋರಿ ನಮ್ಮ ವಿಶ್ವವಿದ್ಯಾನಿಲಯಕ್ಕೆ ಬಂದಾಗ ನಮಗೆ ಎರಡು ರೀತಿಯ ತೊಂದರೆಗಳಾಗುವ ಸಂಭವವಿರುತ್ತದೆ. ನಮ್ಮಲ್ಲಿರುವ ಖಾಯಂ ಹುದ್ದೆಗೆ ಅವರು ಬಂದು ಸೇರಿಕೊಂಡಾಗ ನಮ್ಮಲ್ಲಿರುವ ಒಂದು ಪೋಸ್ಟ್ ಕಡಿಮೆಯಾಗುತ್ತದೆ. ಅದೇ ಅವರು ಪೋಸ್ಟ್‌ನೊಂದಿಗೆ ವರ್ಗಾವಣೆಯನ್ನು ತೆಗೆದುಕೊಂಡು ಬಂದರೆ ನಮಗೆ ಅನುಕೂಲವಾಗುತ್ತದೆ. ಹೊಸ ಹುದ್ದೆಗಳನ್ನು ಸೃಷ್ಟಿಸುವ ಸಂಭವವಿರುವುದಿಲ್ಲ. ಜೊತೆಗೆ ಯಾವುದೋ ಒಂದು ಅಧ್ಯಯನ ವಿಭಾಗದಲ್ಲಿ ಅನ್ಯಕಾರ್ಯ ನಿಮಿತ್ತದ ಆಧಾರದ ಮೇಲೆ ಬಂದಂತಹ ಸಂದರ್ಭದಲ್ಲಿ ನಮ್ಮಲ್ಲಿ ಈಗಾಗಲೇ ಅತಿಥಿ ಉಪನ್ಯಾಸಕರಾಗಿ ಕರ್ತವ್ಯವನ್ನು ನಿರ್ವಹಿಸುವಂತಹವರಿಗೆ ಹುದ್ದೆಯಿಲ್ಲದಂತಾಗಿ ಅವರನ್ನು ಹುದ್ದೆಯಿಂದ ಬಿಡುಗಡೆ ಮಾಡಬೇಕಾಗುತ್ತದೆ. ಆದ್ದರಿಂದ ಅವರು ಹುದ್ದೆಯೊಂದಿಗೆ ವರ್ಗಾವಣೆಯಾಗಿ ಬಂದರೆ ಮಾತ್ರ ಅವಕಾಶ ನೀಡಬಹುದು. ಜೊತೆಗೆ ಬೇರೆ ಯಾವ ವಿಶ್ವವಿದ್ಯಾನಿಲಯವು ಹುದ್ದೆಯೊಂದಿಗೆ ವರ್ಗಾವಣೆಗೊಳ್ಳಲು ಒಪ್ಪುವುದಿಲ್ಲವೆಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ನಮ್ಮಲ್ಲಿರುವಂತಹ ಅತಿಥಿ ಉಪನ್ಯಾಸಕರುಗಳು ಇಂದಲ್ಲ ನಾಳೆ ಖಾಯಂ ಅಧ್ಯಾಪಕರುಗಳಾಗಬಹುದು ಎಂಬ ನಿರೀಕ್ಷೆಯಲ್ಲಿರುತ್ತಾರೆ. ಆದ್ದರಿಂದ ಅಂತರ ವಿಶ್ವವಿದ್ಯಾನಿಲಯ ವರ್ಗಾವಣೆಯನ್ನು ಕೊಡುವುದು ಬೇಡವೆಂದರು. ಇದಕ್ಕೆ ಸಿಂಡಿಕೇಟ್‌ನ ಸದಸ್ಯರುಗಳು ಸಮ್ಮತಿಸಿದರು.<br><br>ಕುಲಸಚಿವರು ಮಾತನಾಡಿ ನಮ್ಮಲ್ಲಿರುವ ಅತಿಥಿ ಉಪನ್ಯಾಸಕರುಗಳು ಅಧ್ಯಾಪಕರುಗಳ ಹುದ್ದೆಗೆ ಅರ್ಹರಿದ್ದಾರೆ. ಅವರೆಲ್ಲರೂ ಯಾವಾಗ ಖಾಯಂ ಹುದ್ದೆಗೆ ಅಧಿಸೂಚನೆ ಹೊರಡಿಸುತ್ತಾರೋ ಎಂಬ ನಿರೀಕ್ಷೆಯಲ್ಲಿ ಹಾಗೂ ನಾವು ಸಹ ಖಾಯಂ |

| | |
|---|---|
| | ಉದ್ಯೋಗಿಗಳಾಗಬಹುದೆಂಬ ಆಶಾಭಾವನೆಯನ್ನು ಇಟ್ಟುಕೊಂಡಿರುತ್ತಾರೆ. ಆದ್ದರಿಂದ ಅಂತರ ವಿಶ್ವವಿದ್ಯಾನಿಲಯ ವರ್ಗಾವಣೆಯನ್ನು ಕೋರಿ ಬಂದಾಗ ಹುದ್ದೆಯೊಂದಿಗೆ ಬಂದರೆ ಮಾತ್ರ ಅವಕಾಶ ನೀಡಬಹುದು ಎಂದು ತಿಳಿಸಿದರು. |
| **ತೀರ್ಮಾನ** | ಡಾ. ಸರಳ ಕೆ.ಎಸ್., ಪ್ರಾಧ್ಯಾಪಕರು, ಕುವೆಂಪು ವಿಶ್ವವಿದ್ಯಾನಿಲಯ ಇವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅಂತರ ವಿಶ್ವವಿದ್ಯಾನಿಲಯ ವರ್ಗಾವಣೆಯು ಹುದ್ದೆ ಸಮೇತ ಬರುವುದಾದರೆ ನೀಡಬಹುದೆಂದು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ**<br>**2024/2.20** | ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸ ಅಧ್ಯಯನ ವಿಭಾಗದಲ್ಲಿ ಸ್ಥಾಪಿಸಲಾಗಿರುವ ಟಿಪ್ಪು ಸುಲ್ತಾನ್ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗ್ಗೆ. |
| | ಕುಲಸಚಿವರು ಮಾತನಾಡಿ ವಿಶ್ವವಿದ್ಯಾನಿಲಯದ ಇತಿಹಾಸ ಅಧ್ಯಯನ ವಿಭಾಗದಲ್ಲಿ ಸ್ಥಾಪಿಸಲಾಗಿರುವ ಟಿಪ್ಪು ಸುಲ್ತಾನ್ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಸಂಬಂಧ ಮೂವರು ಶಿಕ್ಷಣ ತಜ್ಞರಾದ ಡಾ. ಎನ್. ಸರಸ್ವತಿ, ನಿವೃತ್ತ ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ವಿಭಾಗ, ಡಾ. ಅಶ್ವತ್ಥ ನಾರಾಯಣ, ನಿವೃತ್ತ ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ವಿಭಾಗ, ಪ್ರೊ. ಮಹಾದೇವಿ, ಮೈಸೂರು ಇವರ ಹೆಸರುಗಳನ್ನು ಶಿಫಾರಸ್ಸು ಮಾಡಲಾಗಿದೆ ಎಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಹಾಗೂ ಶ್ರೀ ಸಿ. ನಾಗರಾಜು ಅವರುಗಳು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ವಾಲ್ಮೀಕಿ ಅಧ್ಯಯನ ಪೀಠ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಪೀಠಕ್ಕೆ ರೂ.1.00 ಕೋಟಿಗಳ ಅನುದಾನ ಕೋರಿ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲು ಹಾಗೆಯೇ ವಿಶ್ವವಿದ್ಯಾನಿಲಯದ ಅಭಿವೃದ್ಧಿಗಾಗಿ ಹಾಗೂ ಕೆಲವೊಂದು ಸಲಹೆ ಮತ್ತು ಸಹಕಾರವನ್ನು ಕೋರುವ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು, ಅಧಿಕಾರಿಗಳು ಹಾಗೂ ಸಿಂಡಿಕೇಟ್ ಸದಸ್ಯರುಗಳನ್ನೊಳಗೊಂಡಂತೆ ಸನ್ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿ ಅಹವಾಲನ್ನು ಸಲ್ಲಿಸಬಹುದೆಂದು ತಿಳಿಸಿದರು.<br><br>ಡಾ. ಬಸವರಾಜು ಸಿ. ಅವರು ಮಾತನಾಡಿ ಹಿಂದೆ ವಿಶ್ವವಿದ್ಯಾನಿಲಯದಲ್ಲಿ ಕಾಯಕಯೋಗಿ ಬಸವಣ್ಣ ಹಾಗೂ ಕನಕದಾಸರ ಪುತ್ಥಳಗಳನ್ನು ಮಾನಸಗಂಗೋತ್ರಿಯ ಆವರಣದಲ್ಲಿ ಸ್ಥಾಪಿಸಲು ಈಗಾಗಲೇ ಸರ್ಕಾರಕ್ಕೆ ಅಹವಾಲನ್ನು ಸಲ್ಲಿಸಲಾಗಿದೆ. ಪುತ್ಥಳಯನ್ನು ಸ್ಥಾಪಿಸುವುದರ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಲ್ಲಿ ವೈಯಕ್ತಿಕವಾಗಿ ಶ್ರಮಿಸುವುದಾಗಿ ತಿಳಿಸಿದರು.<br><br>ಶ್ರೀ ಮಾದೇಶು ಅವರು ಮಾತನಾಡಿ ಪುತ್ಥಳಗಳನ್ನು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸುವುದರ ಬಗ್ಗೆ ಚಿಂತಿಸುವುದು ಒಳಿತು ಎಂದು ತಿಳಿಸಿದರು. ಹಾಗೆಯೇ ಪುತ್ಥಳಗಳನ್ನು ಸ್ಥಾಪಿಸುವುದರ ಬದಲಾಗಿ ಪೀಠಗಳನ್ನು ಸ್ಥಾಪಿಸಿದರೆ ವಿದ್ಯಾರ್ಥಿಗಳಿಗೂ ಅನುಕೂಲವಾಗುತ್ತದೆ ಎಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ ವಿಶ್ವವಿದ್ಯಾನಿಲಯದ ಆವರಣದಲ್ಲಿ ಪುತ್ಥಳಗಳನ್ನು ಸ್ಥಾಪಿಸಬಾರದೆಂದು ಸರ್ಕಾರದಿಂದ ಆದೇಶವಾಗಿದೆ ಎಂದು ತಿಳಿಸಿದರು.<br><br>ಪ್ರೊ. ಶಬ್ಬೀರ್ ಮೊಹಮ್ಮದ್ ಮುಸ್ತಾಫಾ ಅವರು ಮಾತನಾಡಿ ತಾವು ನೀಡಿರುವ ಮೂವರು ಹೆಸರುಗಳನ್ನು ಯಾರು ನೀಡಿರುತ್ತಾರೆ. ಹಾಗೆಯೇ ಇಲ್ಲಿ ನೀಡಿರುವ ಪ್ರಾಧ್ಯಾಪಕರುಗಳ ಸ್ವವಿವರಗಳನ್ನು ನೀಡಿರುವುದಿಲ್ಲ ಎಂದು ಕೇಳಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಅಧ್ಯಯನ ಪೀಠಗಳನ್ನು ಸ್ಥಾಪಿಸಲಾಗಿರುವ ಆಯಾಯ ಅಧ್ಯಯನ ವಿಭಾಗಗಳ ಅಧ್ಯಕ್ಷರು ವಿಭಾಗದ ಮಟ್ಟದಲ್ಲಿ ಸಭೆ ಸೇರಿ ಮೂವರು ಹೆಸರುಗಳನ್ನು ಶಿಫಾರಸ್ಸು ಮಾಡಿ ಕಳುಹಿಸಿರುತ್ತಾರೆ. ಮುಂದಿನ ಸಭೆಯಲ್ಲಿ ಅನುಸಮರ್ಥನೆಗಾಗಿ ಇವರುಗಳ ಸ್ವವಿವರಗಳನ್ನು ಒದಗಿಸುವುದಾಗಿ ತಿಳಿಸಿದರು. |

| | |
|---|---|
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸ ಅಧ್ಯಯನ ವಿಭಾಗದಲ್ಲಿ ಸ್ಥಾಪಿಸಲಾಗಿರುವ ಟಿಪ್ಪು ಸುಲ್ತಾನ್ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ವಿವೇಚನಾಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2024/2.21** | ಮೈಸೂರು ವಿಶ್ವವಿದ್ಯಾನಿಲಯದ 2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ದೃಢೀಕರಿಸುವ ಕುರಿತು ಮತ್ತು ಕಾರ್ಯಾದೇಶ ನೀಡಿರುವ ಬಗ್ಗೆ. |
| | ಹಣಕಾಸು ಅಧಿಕಾರಿಗಳು ಮಾತನಾಡಿ ಮೈಸೂರು ವಿಶ್ವವಿದ್ಯಾನಿಲಯದ 2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ದೃಢೀಕರಿಸುವ ಕುರಿತು ಮೆ: dnA Consulting, ಮೈಸೂರು ಇವರಿಗೆ ಕಾರ್ಯನಿರ್ವಹಿಸಲು ಕಾರ್ಯಾದೇಶ ನೀಡಿರುವ ಬಗ್ಗೆ ಸಭೆಯ ಅನುಮೋದನೆಯನ್ನು ಕೋರಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ 2021-22 ಹಾಗೂ 2022-23ನೇ ಸಾಲಿನ ಲೆಕ್ಕಪತ್ರಗಳಲ್ಲಿ ಆದಂತಹ ತೊಡಕುಗಳು ಮರುಕಳಸದಂತೆ ನೋಡಿಕೊಳ್ಳಬೇಕೆಂದು ಸಲಹೆ ನೀಡಿದರು. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ 2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ದೃಢೀಕರಿಸುವ ಕುರಿತು ಮೆ: dnA Consulting, ಮೈಸೂರು ಇವರಿಗೆ ಕಾರ್ಯನಿರ್ವಹಿಸಲು ನೀಡಿರುವ ಕಾರ್ಯಾದೇಶವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2024/2.22** | ಉಚ್ಚ ನ್ಯಾಯಾಲಯದ ತಡೆಯಾಜ್ಞೆ ತಂದಿರುವ ಅತಿಥಿ ಉಪನ್ಯಾಸಕರುಗಳ ವೇತನವನ್ನು ಪರಿಷ್ಕರಿಸುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ 15, 20 ಮತ್ತು 25 ವರ್ಷಗಳಿಂದ ಅತಿಥಿ ಉಪನ್ಯಾಸಕರುಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವವರು ಸೇವೆಯನ್ನು ಖಾಯಂಗೊಳಿಸಿ ಎಂದು ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದ್ದರು. ಈ ಸಂಬಂಧ ಘನ ನ್ಯಾಯಾಲಯವು (ಏಕಸದಸ್ಯ ಪೀಠ) ಅತಿಥಿ ಉಪನ್ಯಾಸಕರ ಪ್ರಾರ್ಥನೆಯನ್ನು ಪುರಸ್ಕರಿಸಿ ಆದೇಶ ನಿಡಿರುತ್ತದೆ. ಈ ಆದೇಶವನ್ನು ಪ್ರಶ್ನಿಸಿ ವಿಶ್ವವಿದ್ಯಾನಿಲಯವು ಘನ ವಿಭಾಗೀಯ ಪೀಠದಲ್ಲಿ (ದ್ವಿಸದಸ್ಯ ಪೀಠ) ಮೇಲ್ಮನವಿ ಸಲ್ಲಿಸಲಾಗಿದ್ದು, ಘನ ನ್ಯಾಯಾಲಯವು ಏಕಸದಸ್ಯ ಪೀಠದ ಆದೇಶಕ್ಕೆ ತಡೆಯಾಜ್ಞೆ ನೀಡಿರುತ್ತದೆ. ಪ್ರಸ್ತುತ ಮೇಲ್ಮನವಿಯು ಘನ ನ್ಯಾಯಾಲಯದ ಮುಂದೆ ಇನ್ನೂ ಇತ್ಯರ್ಥವಾಗಿರುವುದಿಲ್ಲ.<br><br>ಮುಂದುವರೆದು, ವಿಶ್ವವಿದ್ಯಾನಿಲಯದ ಇನ್ನುಳಿದ ಅತಿಥಿ ಉಪನ್ಯಾಸಕರುಗಳಿಗೆ ನವೆಂಬರ್ 2020ರಲ್ಲಿ ವೇತನವನ್ನು ಪರಿಷ್ಕರಿಸಲಾಗಿತ್ತು. ಆದರೆ ಉಚ್ಚ ನ್ಯಾಯಾಲಯದ ಮೊರೆ ಹೋಗಿರುವ ಅತಿಥಿ ಉಪನ್ಯಾಸಕರುಗಳಿಗೆ ವೇತನವನ್ನು ಪರಿಷ್ಕರಣೆ ಮಾಡಿರುವುದಿಲ್ಲ. ಪ್ರಸ್ತುತ ಎಲ್ಲಾ ಅತಿಥಿ ಉಪನ್ಯಾಸಕರುಗಳಂತೆಯೇ ಇವರುಗಳು ಸಹ ಕರ್ತವ್ಯವನ್ನು ನಿರ್ವಹಿಸುತ್ತಿರುವುದರಿಂದ ಘನ ನ್ಯಾಯಾಲಯದ ಮೊರೆ ಹೋಗಿರುವ ಅತಿಥಿ ಉಪನ್ಯಾಸಕರುಗಳು ಮನವಿಯನ್ನು ಸಲ್ಲಿಸಿದ್ದು, ನಾವುಗಳು ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದೂ ಕುಟುಂಬ ನಿರ್ವಹಣೆ ಕಷ್ಟ ಸಾಧ್ಯವಾಗಿದೆ. ಆದ್ದರಿಂದ ನಮಗೂ ಸಹ ವೇತನವನ್ನು ಪರಿಷ್ಕರಿಸಿ ನೀಡಬೇಕೆಂದು ಕೋರಿರುತ್ತಾರೆ ಎಂಬ ವಿಷಯವನ್ನು ಸಭೆಯ ಗಮನಕ್ಕೆ ತಂದರು.<br><br>ಕುಲಸಚಿವರು ಮಾತನಾಡಿ ಈಗ ಅತಿಥಿ ಉಪನ್ಯಾಸಕರುಗಳಿಗೆ ವೇತನವನ್ನು ನೀಡುತ್ತಿರುವುದು ಅಂದಾಜು ರೂ.1.50 ಕೋಟಿಗಳಾಗುತ್ತಿದೆ. ಇವರಿಗೆ ವೇತನ ಪರಿಷ್ಕರಣೆ ಮಾಡಿದಲ್ಲಿ ಅಂದಾಜು ವಾರ್ಷಿಕ ರೂ.50.00 ಲಕ್ಷಗಳು ಹೆಚ್ಚಿನ ಹೊರೆಯಾಗುತ್ತದೆ ಎಂದು ತಿಳಿಸಿದರು. ವೇತನ ಪರಿಷ್ಕರಣೆಗೆ ಮನವಿ ಸಲ್ಲಿಸಿರುವ ಅತಿಥಿ ಉಪನ್ಯಾಸಕರುಗಳು ತಮ್ಮ |

| | |
|---|---|
| | ಹುದ್ದೆಯನ್ನು ಖಾಯಂಗೊಳಿಸಿ ಎಂದು ನ್ಯಾಯಾಲಯಕ್ಕೆ ಮೊರೆ ಹೋಗಿರುತ್ತಾರೆ ಎಂದು ಸಭೆಯ ಗಮನಕ್ಕೆ ತಂದರು. |
| ತೀರ್ಮಾನ | ಘನ ಉಚ್ಚ ನ್ಯಾಯಾಲಯದ ಮೊರೆ ಹೋಗಿರುವ ಅತಿಥಿ ಉಪನ್ಯಾಸಕರುಗಳಿಗೆ ಸಿಂಡಿಕೇಟ್ ಸಭೆಯ ನಿರ್ಣಯದ ದಿನಾಂಕದಿಂದ ಅನ್ವಯವಾಗುವಂತೆ ಇನ್ನುಳಿದ ಅತಿಥಿ ಉಪನ್ಯಾಸಕರುಗಳಿಗೆ ವೇತನವನ್ನು ಪರಿಷ್ಕರಿಸಿರುವಂತೆ ಇವರುಗಳಿಗೂ ಪರಿಷ್ಕೃತ ವೇತನವನ್ನು ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2024/2.23 | ಮೈಸೂರು ವಿಶ್ವವಿದ್ಯಾನಿಲಯ ಸ್ಕೂಲ್ ಆಫ್ ಇಂಜಿನಿಯರಿಂಗ್ ನಿಕಾಯಕ್ಕೆ ಡೀನರನ್ನು ನೇಮಿಸಿರುವ ಬಗ್ಗೆ-ಅನುಸಮರ್ಥನೆಗಾಗಿ. |
| | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 21(1) ರನ್ವಯ ಪ್ರೊ. ಎಸ್.ಜೆ. ಮಂಜುನಾಥ್, ಪ್ರಾಧ್ಯಾಪಕರು, ವ್ಯವಹಾರ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 29-02-2024 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಮೈಸೂರು ವಿಶ್ವವಿದ್ಯಾನಿಲಯ ಸ್ಕೂಲ್ ಆಫ್ ಇಂಜಿನಿಯರಿಂಗ್ ನಿಕಾಯಕ್ಕೆ ಡೀನರನ್ನಾಗಿ ನೇಮಕ ಮಾಡಿ ಅಧಿಸೂಚನೆ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2024/2.24 | ವಿಶ್ವವಿದ್ಯಾನಿಲಯ ಉದ್ಯೋಗಿಗಳ ಹಂಗಾಮಿ ಸೇವೆಯನ್ನು ಪಿಂಚಣಿ ಸೌಲಭ್ಯಗಳ ಲೆಕ್ಕಾಚಾರಕ್ಕೆ ಅರ್ಹತಾ ಸೇವೆಯಾಗಿ ಪರಿಗಣಿಸುವ ಬಗ್ಗೆ. |
| ತೀರ್ಮಾನ | ಮುಂದೂಡಲಾಯಿತು. |
| ಸಾಮಾನ್ಯ ಸಭೆ 2024/2.25 | ಸರ್ ಎಂ.ವಿ. ಸ್ನಾತಕೋತ್ತರ ಕೇಂದ್ರದ ಒಟ್ಟು 32 ತಾತ್ಕಾಲಿಕ ನೌಕರರುಗಳನ್ನು ಮುಂದುವರೆಸುವ ಬಗ್ಗೆ. |
| ತೀರ್ಮಾನ | ಮುಂದೂಡಲಾಯಿತು |
| ಸಾಮಾನ್ಯ ಸಭೆ 2024/2.26 | ಮೈಸೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪಿಎಚ್.ಡಿ. ಸಂಶೋಧಕರಿಗೆ ಶಿಷ್ಯವೇತನ ನೀಡುವ ಬಗ್ಗೆ. |
| ಅ) | ಮೈಸೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪಿಹೆಚ್.ಡಿ ಸಂಶೋಧಕರಿಗೆ ಸರ್ಕಾರ ನೀಡಿರುವ ಅನುದಾನವನ್ನು ಹಂಚಿಕೆ ಮಾಡಿ ಉಳಿದಿರುವ ಮೊತ್ತವನ್ನು ಹಂಚಿಕೆ ಮಾಡುವ ಬಗ್ಗೆ. |
| ತೀರ್ಮಾನ | **2022-23ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪಿಹೆಚ್.ಡಿ ಸಂಶೋಧಕರುಗಳಿಗೆ ಈಗಾಗಲೇ ಪಾವತಿಸಿರುವ ಹತ್ತು ತಿಂಗಳ (ಏಪ್ರಿಲ್ 2022 ರಿಂದ ಜನವರಿ 2023 ರವರೆಗೆ ಪಾವತಿಯಾಗಿರುವುದನ್ನು ಹೊರತುಪಡಿಸಿ) ಉಳಿದ ಅವಧಿ ಫೆಬ್ರವರಿ ಮತ್ತು ಮಾರ್ಚ್ 2023 ರ ಅವಧಿಯಲ್ಲಿ ಸಂಶೋಧನಾ ಕಾರ್ಯನಿರ್ವಹಿಸಿದ ವಿದ್ಯಾರ್ಥಿಗಳಿಗೆ ಉಳಿಕೆ ಸರ್ಕಾರದಿಂದ ಬಿಡುಗಡೆಯಾದ SCSP/TSP ಉಳಿಕೆ ಅನುದಾನವನ್ನು ನಿಯಮಾನುಸಾರ ಪ್ರಮಾಣಕ್ಕನುಗುಣವಾಗಿ (Proportionate) ವಿತರಿಸಲು ಸಭೆಯು ತೀರ್ಮಾನಿಸಿತು.** |
| ಆ) | 2020-21ನೇ ಸಾಲಿನಲ್ಲಿ ಶಿಷ್ಯವೇತನಕ್ಕೆ ಆಯ್ಕೆಯಾಗಿದ್ದ 46 ಸಂಶೋಧಕರಿಗೆ ಪಿಹೆಚ್.ಡಿ ತಾತ್ಕಾಲಿಕ ನೋಂದಣಿ ದಿನಾಂಕದಿಂದ ಶಿಷ್ಯವೇತನಕ್ಕೆ ವರದಿ ಮಾಡಿಕೊಂಡ ದಿನಾಂಕದವರೆಗಿನ ಅವಧಿಯ ಹಿಂಬಾಕಿ ಶಿಷ್ಯವೇತನಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ: ಇಡಿ 89 ಹೆಚ್‌ಪಿಯು 2023, ಬೆಂಗಳೂರು, ದಿನಾಂಕ: 12ನೇ ಜನವರಿ 2024 ರಂತೆ ಬಿಡುಗಡೆಯಾಗಿರುವ ರೂ.86 ಲಕ್ಷಗಳ ಅನುದಾನವನ್ನು ವಿತರಿಸುವ ಬಗ್ಗೆ. |
| ತೀರ್ಮಾನ | **2020-21ನೇ ಸಾಲಿನಲ್ಲಿ ಶಿಷ್ಯವೇತನಕ್ಕೆ ಆಯ್ಕೆಯಾಗಿದ್ದ 46 ಸಂಶೋಧಕರಿಗೆ ಪಿಹೆಚ್.ಡಿ ತಾತ್ಕಾಲಿಕ ನೋಂದಣಿ ದಿನಾಂಕದಿಂದ ಶಿಷ್ಯವೇತನಕ್ಕೆ ವರದಿ ಮಾಡಿಕೊಂಡ ದಿನಾಂಕದವರೆಗಿನ ಅವಧಿಯ ಹಿಂಬಾಕಿ ಶಿಷ್ಯವೇತನವನ್ನು ದಿನಾಂಕ: 12-01-2024 ರಲ್ಲಿ ಸರ್ಕಾರವು ಬಿಡುಗಡೆ** |

| | |
|---|---|
| | **ಮಾಡಿರುವ ಅನುದಾನ ರೂ.86 ಲಕ್ಷಗಳಿಂದ ಸರ್ಕಾರದ ಮಾರ್ಗಸೂಚಿಯನ್ವಯ ವಿತರಿಸಲು ಸಭೆಯು ತೀರ್ಮಾನಿಸಿತು.** |
| ಇ) | 2023-24ನೇ ಸಾಲಿಗೆ ಮೈಸೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧಕರಿಗೆ ಪಿಹೆಚ್.ಡಿ ಶಿಷ್ಯವೇತನಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ: ಸಕಇ/ಪಜಾಉಯೋ/ಇ-1185512/2023-24, ದಿನಾಂಕ: 12-01-2024 ರಂತೆ ಬಿಡುಗಡೆಯಾಗಿರುವ ರೂ.2.75 ಕೋಟಿಗಳ ಅನುದಾನವನ್ನು ವಿನಿಯೋಗಿಸಿಕೊಳ್ಳುವ ಕುರಿತು. |
| | ಕುಲಸಚಿವರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಮತ್ತು ಪರಿಶಿಷ್ಟ ಪಂಗಡದ ಪಿಎಚ್.ಡಿ. ಸಂಶೋಧಕರಿಗೆ ಶಿಷ್ಯವೇತನ ನೀಡುವ ಬಗೆಗಿನ ವಿಷಯವನ್ನು ಸಭೆಗೆ ಮಂಡಿಸಿ, ಈ ವಿಷಯದಲ್ಲಿ ಮೂರು ಅಂಶಗಳಿದ್ದು ಅವುಗಳಲ್ಲಿ ಮೊದಲನೆಯದು ಮೈಸೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪಿಎಚ್.ಡಿ. ಸಂಶೋಧಕರಿಗೆ ಸರ್ಕಾರ ನೀಡಿರುವ ಅನುದಾನವನ್ನು ಹಂಚಿಕೆ ಮಾಡಿ ಉಳಿದಿರುವ ಮೊತ್ತವನ್ನು ಹಂಚಿಕೆ ಮಾಡುವುದರ ಬಗ್ಗೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಸರ್ಕಾರದಿಂದ ನೀಡಿರುವ ಅನುದಾನದಲ್ಲಿ 2022-23ನೇ ಸಾಲಿಗೆ ಸಂಶೋಧಕರುಗಳಿಗೆ ರೂ. 10,000/-ಗಳನ್ನು ನೀಡಲಾಗಿದೆ. ಸರ್ಕಾರಕ್ಕೆ ಪತ್ರವನ್ನು ಸಹ ಬರೆಯಲಾಗಿದೆ. ಸಮಾಜ ಕಲ್ಯಾಣ ವಿಧಾನ ಮಂಡಲ ಸಮಿತಿ, ಎಸ್‌ಸಿ/ಎಸ್‌ಟಿ ಕಲ್ಯಾಣ ಸಮಿತಿಗಳಲ್ಲೂ ಈ ವಿಷಯದ ಬಗ್ಗೆ ಚರ್ಚೆಯಾಗಿದ್ದು, ಶಿಷ್ಯವೇತನವನ್ನು ಹಂಚಿಕೆ ಮಾಡುವಂತೆ ತಿಳಿಸಿರುತ್ತಾರೆ. ಆದರೆ ಲಿಖಿತವಾಗಿ ಯಾವುದೇ ಪತ್ರವು ನಮಗೆ ಬಂದಿರುವುದಿಲ್ಲ ಎಂದು ತಿಳಿಸಿದರು.<br><br>ಎರಡನೆಯದು 2020-21ನೇ ಸಾಲಿನಲ್ಲಿ ಶಿಷ್ಯವೇತನಕ್ಕೆ ಆಯ್ಕೆಯಾಗಿದ್ದ 46 ಸಂಶೋಧಕರುಗಳಿಗೆ ಪಿಎಚ್.ಡಿ. ತಾತ್ಕಾಲಿಕ ನೋಂದಣಿ ದಿನಾಂಕದಿಂದ ಶಿಷ್ಯವೇತನಕ್ಕೆ ವರದಿ ಮಾಡಿಕೊಂಡ ದಿನಾಂಕದವರೆಗಿನ ಅವಧಿಯ ಹಿಂಬಾಕಿ ಶಿಷ್ಯವೇತನಕ್ಕಾಗಿ ಸರ್ಕಾರವು ಜನವರಿ, 2024ರಲ್ಲಿ ರೂ. 86.00 ಲಕ್ಷಗಳ ಅನುದಾನವನ್ನು ವಿತರಣೆ ಮಾಡಲಿಕ್ಕೆ ನೀಡಿದೆ. 46 ಸಂಶೋಧಕರುಗಳಿಗೆ ಪ್ರತಿ ಮಾಹೆ ತಲಾ ರೂ.10,000/-ಗಳಂತೆ ವಿತರಣೆ ಮಾಡಲು ಅನುಮೋದನೆಯನ್ನು ಕೋರಿದರು.<br><br>ಜೊತೆಗೆ ಸಂಶೋಧಕರುಗಳು ವಿಶ್ವವಿದ್ಯಾನಿಲಯದಿಂದ ರೂ. 13,000/-, ಎಸ್‌ಆರ್‌ಎಫ್‌ನಿಂದ ರೂ.14,000/-ಗಳನ್ನು ಸೇರಿಸಿ ನೀಡುವಂತೆ ಕೋರುತ್ತಿದ್ದಾರೆ. ಈ ಬಗ್ಗೆಯೂ ಕೂಡ ಸಮಾಜ ಕಲ್ಯಾಣ ಇಲಾಖೆಯ ವಿಧಾನ ಮಂಡಲದ ಸಮಿತಿಯಲ್ಲಿ ಚರ್ಚೆಯಾದಂತಹ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಆರ್ಥಿಕ ಪರಿಸ್ಥಿತಿ ಸರಿಯಿಲ್ಲ ಎಂಬುದನ್ನು ಸಭೆಯ ಗಮನಕ್ಕೆ ತಂದಿರುವುದಾಗಿ ತಿಳಿಸಿದರು. ಜೊತೆಗೆ ಸಮಿತಿಯಲ್ಲಿ ಈಗ ಬಿಡುಗಡೆ ಮಾಡಿರುವ ಅನುದಾನವನ್ನು ಸಂಶೋಧಕರುಗಳಿಗೆ ವಿತರಿಸಲು ತಿಳಿಸಿರುತ್ತಾರೆ ಎಂದು ಸಭೆಯ ಗಮನಕ್ಕೆ ತಂದರು.<br><br>ಮೂರನೆಯದು 2023-24ನೇ ಸಾಲಿಗೆ ಮೈಸೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧಕರಿಗೆ ಪಿಎಚ್.ಡಿ. ಶಿಷ್ಯವೇತನಕ್ಕಾಗಿ ಸರ್ಕಾರದಿಂದ ರೂ.2.75 ಕೋಟಿಗಳ ಅನುದಾನ ಬಿಡುಗಡೆಯಾಗಿರುವ ವಿಷಯವನ್ನು ಸಭೆಗೆ ಮಂಡಿಸಿ, ಸದರಿ ಬಗೆಗಿನ ಮಾಹಿತಿಯನ್ನು ಹಣಕಾಸು ಅಧಿಕಾರಿಗಳು ನೀಡುವರು ಎಂದು ತಿಳಿಸಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧಕರುಗಳಿಗೆ 2023-24ನೇ ಸಾಲಿಗೆ ಸರ್ಕಾರದಿಂದ ಜನವರಿ 2024ರಲ್ಲಿ ಬಿಡುಗಡೆಯಾಗಿರುವ ಅನುದಾನ ರೂ. 2.75 ಕೋಟಿ. ವಿಶ್ವವಿದ್ಯಾನಿಲಯದಿಂದ ಈಗಾಗಲೇ ಜೆಆರ್‌ಎಫ್ ಶಿಷ್ಯವೇತನ ಪಡೆಯುವ ಸಂಶೋಧಕರುಗಳಿಗೆ ತಲಾ ರೂ. 23,000/-ಗಳನ್ನು ಎಸ್‌ಆರ್‌ಎಫ್ ಶಿಷ್ಯವೇತನ ಪಡೆಯುವ ಸಂಶೋಧಕರುಗಳಿಗೆ ತಲಾ ರೂ. 25,000/-ಗಳನ್ನು ನೀಡಲಾಗಿದೆ. ಸರ್ಕಾರದಿಂದ ಬಿಡುಗಡೆಯಾಗಿರುವ ರೂ. 2.75 |

| | |
|---|---|
| | ಕೋಟಿಗಳನ್ನು ವಿಶ್ವವಿದ್ಯಾನಿಲಯದಿಂದ ಈಗಾಗಲೇ ಸಂಶೋಧಕರುಗಳಿಗೆ ಕೊಟ್ಟಿರುವಂತಹ ಮೊತ್ತವಾಗಿದೆ. ಸರ್ಕಾರದ ಆದೇಶದ ಪ್ರಕಾರ ನಾವು ಸಂಶೋಧಕರುಗಳಿಗೆ ನೀಡಬೇಕಾದ ಶಿಷ್ಯವೇತನ ರೂ. 10,000/-ಗಳು, ಹಾಗೂ ವಿಶ್ವವಿದ್ಯಾನಿಲಯದ ವತಿಯಿಂದ ರೂ.13,000/-ಗಳನ್ನು ನೀಡಲಾಗುತ್ತಿದೆ. ಹಾಗೆಯೇ ಪ್ರತಿ ಮಾಹೆ ಶಿಷ್ಯವೇತನದಾರರುಗಳಿಗೆ ರೂ.23,000/-ಗಳನ್ನು ಹಾಗೂ ರೂ.25,000/-ಗಳನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧಕರುಗಳಿಗೆ ಸರ್ಕಾರದಿಂದ ಬಿಡುಗಡೆಯಾಗಿರುವ ರೂ.2.75 ಕೋಟಿ ಮೊತ್ತದ ಹಣವನ್ನು ಸರ್ಕಾರದಿಂದ ಹಾಗೂ ವಿಶ್ವವಿದ್ಯಾನಿಲಯದಿಂದ ನಿಗದಿಯಾಗಿರುವಂತೆ ಸಂಶೋಧಕರುಗಳಿಗೆ ಪೂರ್ಣಪ್ರಮಾಣದಲ್ಲಿ ಶಿಷ್ಯವೇತನವನ್ನು ನೀಡಲಾಗಿದೆಯೇ ಎಂದು ಕೇಳಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನದ ಮೊತ್ತ ರೂ.2.75 ಗಳನ್ನು ವಿಶ್ವವಿದ್ಯಾನಿಲಯಕ್ಕೆ ಮರುಭರಿಕೆ ಮಾಡಿಕೊಳ್ಳಬೇಕಾಗಿದೆ ಎಂದು ತಿಳಿಸಿದರು. ಹಾಗೂ ಸಂಶೋಧಕರುಗಳಿಗೆ ನೀಡುತ್ತಿರುವ ರೂ.13,000/-ಗಳಷ್ಟು ಶಿಷ್ಯವೇತನವನ್ನು ಯಾವ ವಿಶ್ವವಿದ್ಯಾನಿಲಯವು ನೀಡುತ್ತಿಲ್ಲ. ನಮ್ಮ ವಿಶ್ವವಿದ್ಯಾನಿಲಯದಲ್ಲೇ ಸಂಶೋಧಕರುಗಳಿಗೆ ಹೆಚ್ಚಿನ ಮೊತ್ತವಾಗಿ ಶಿಷ್ಯವೇತನವನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು.<br><br>ಶ್ರೀ ಹೆಚ್.ಎಸ್. ನಟರಾಜು ಅವರು ಮಾತನಾಡಿ ರೂ.10,000/-ಗಳನ್ನು ಸರ್ಕಾರದಿಂದ ರೂ.13,000/-ಗಳನ್ನು ವಿಶ್ವವಿದ್ಯಾನಿಲಯದಿಂದ ನೀಡಲಾಗುತ್ತಿದೆ ಎಂಬ ಅಂಶವನ್ನು ಎಲ್ಲಿಯೂ ನಮೂದಿಸಿರುವುದಿಲ್ಲ. 2018ರಲ್ಲಿ ಶಿಷ್ಯವೇತನವನ್ನು ಹೆಚ್ಚು ಮಾಡಲಾಗಿತ್ತು. ಆದರೆ ಇದರ ಉಪಯೋಗವನ್ನು 2022-23ನೇ ಸಾಲಿನಲ್ಲಿ ಪಡೆಯಲಾಗಿತ್ತು ಎಂದು ಹಾಗೂ ಆಯಾಯ ವರ್ಷದ ಅನುದಾನದ ಮೊತ್ತವನ್ನು ಆಯಾಯ ಸಾಲಿನಲ್ಲೇ ವಿನಿಯೋಗಿಸಿಕೊಳ್ಳಬೇಕು ಎಂದು ತಿಳಿಸಲಾಗಿದೆ ಎಂದು ತಿಳಿಸಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ನಿಗದಿಪಡಿಸಿರುವಂತೆ ಹಾಗೂ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲೂ ಶಿಷ್ಯವೇತನವನ್ನು ರೂ. 10,000/-ಗಳನ್ನು ಮಾತ್ರ ನೀಡಲಾಗುತ್ತಿದೆ. ಆದರೆ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಮಾತ್ರ ರೂ. 10,000/-ಗಳ ಜೊತೆಗೆ ವಿಶ್ವವಿದ್ಯಾನಿಲಯದ ವತಿಯಿಂದ ರೂ.13,000/-ಗಳನ್ನು ಸೇರಿಸಿ ಒಟ್ಟು ರೂ.23,000/-ಗಳ ಶಿಷ್ಯವೇತನವನ್ನು ನೀಡಲಾಗುತ್ತಿದೆ ಎಂದು ತಿಳಿಸಿ, ಈಗಾಗಲೇ ಶಿಷ್ಯವೇತನವನ್ನು ವಿಶ್ವವಿದ್ಯಾನಿಲಯದಿಂದಲೇ ನೀಡಲಾಗಿರುವುದರಿಂದ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನದ ಮೊತ್ತ ರೂ.2.75 ಕೋಟಿಗಳನ್ನು ವಿಶ್ವವಿದ್ಯಾನಿಲಯದ ಖಾತೆಗೆ ವರ್ಗಾಯಿಸಿಕೊಳ್ಳಬಹುದು ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಕಾರ್ಯಸೂಚಿಯಲ್ಲಿ ನೀಡಿರುವ ಪುಟಸಂಖ್ಯೆ 219ಅನ್ನು ಉಲ್ಲೇಖಿಸಿ ಸಮಾಜ ಕಲ್ಯಾಣ ಇಲಾಖೆಯು ಮೈಸೂರು ವಿಶ್ವವಿದ್ಯಾನಿಲಯದ 227 ಪರಿಶಿಷ್ಟ ಜಾತಿ ಮತ್ತು 16 ಪರಿಶಿಷ್ಟ ಪಂಗಡದ (ಒಟ್ಟು 243) ಪಿಎಚ್.ಡಿ. ಸಂಶೋಧಕರಿಗೆ ಹತ್ತು ತಿಂಗಳಿಗೆ 2022-23ನೇ ಸಾಲಿಗೆ ಸೀಮಿತಗೊಳಿಸಿ ರೂ. 257 ಲಕ್ಷಗಳನ್ನು ಮಂಜೂರು ಮಾಡಿರುವುದನ್ನು ಇದೊಂದು ಬಾರಿಗೆ ಮಾತ್ರ ನೀಡಿ ಸೂಕ್ತ ಮುಚ್ಚಳಿಕೆಯನ್ನು ಪಡೆದುಕೊಂಡು ಸಂಶೋಧನಾ ಕಾರ್ಯ ನಿರ್ವಹಿಸಿದ ಅವಧಿಗೆ ಅನುಪಾತದಲ್ಲಿ ಹಂಚಿಕೆ ಮಾಡಲು ಹಾಗೂ ಒಂದು ವೇಳೆ ಅನುಸೂಚಿತ ಜಾತಿ/ಅನುಸೂಚಿತ ಪಂಗಡದ ಪಿಎಚ್.ಡಿ. ಸಂಶೋಧಕರುಗಳಿಗೆ 2023-24ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಅನುದಾನ ಬಿಡುಗಡೆ ಮಾಡಿದ್ದಲ್ಲಿ ವಿಶ್ವವಿದ್ಯಾನಿಲಯವು ಆಂತರಿಕ ಸಂಪನ್ಮೂಲದಿಂದ ಮುಂಗಡವಾಗಿ ಪಾವತಿಸುವ ಶಿಷ್ಯವೇತನಕ್ಕೆ ಎದುರಾಗಿ ಮರುಭರಿಸಿಕೊಳ್ಳುವ ಷರತ್ತಿನೊಂದಿಗೆ ಶಿಷ್ಯವೇತನವನ್ನು ನೀಡಲು ಸಭೆಯಲ್ಲಿ ತೀರ್ಮಾನಿಸಲಾಗಿರುವ ಅಂಶವನ್ನು ಸಭೆಯ ಗಮನಕ್ಕೆ ತಂದರು. ನಂತರ ಮಾನ್ಯ ಕುಲಪತಿಗಳು ಎಲ್ಲಾ ವಿದ್ಯಾರ್ಥಿಗಳನ್ನು |

ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಆದರೆ ಹಿಂದುಳಿದ ವಿದ್ಯಾರ್ಥಿಗಳಿಗೆ (ಓಬಿಸಿ) ರೂ.12,000/-ಗಳ ಶಿಷ್ಯವೇತನವನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಹಾಗೂ ಡಾ. ಬಸವರಾಜು ಸಿ. ಅವರುಗಳು ಮಾತನಾಡಿ ಹಿಂದುಳಿದ ವಿದ್ಯಾರ್ಥಿಗಳ ಶಿಷ್ಯವೇತನವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಯಾವ ರೀತಿಯ ಕ್ರಮವನ್ನು ಕೈಗೊಳ್ಳಲಾಗಿದೆ ಎಂದು ಕೇಳಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಶಿಷ್ಯವೇತನಕ್ಕೆ ಸಂಬಂಧಿಸಿದಂತೆ ಒಂದು ಸಮಿತಿಯನ್ನು ರಚಿಸಿದ್ದು, ಪ್ರೊ. ಸಣ್ಣಪ್ಪರವರ ಅಧ್ಯಕ್ಷತೆಯಲ್ಲಿ 20 ಸಂಶೋಧಕರುಗಳಿಗೆ ರೂ. 10,000/-ಗಳ ಶಿಷ್ಯವೇತನವನ್ನು ನೀಡಲು ತೀರ್ಮಾನಿಸಲಾಗಿತ್ತು. ಆದರೆ ಶೈಕ್ಷಣಿಕ ವರ್ಷ ಮುಗಿದರೂ ಸಹ ಅವರುಗಳಿಗೆ ಶಿಷ್ಯವೇತನವನ್ನು ಇನ್ನು ನೀಡಲಾಗಿಲ್ಲ ಎಂದು ಸಭೆಯ ಗಮನಕ್ಕೆ ತಂದರು.

ಶ್ರೀ ನಾಗರಾಜು ಸಿ. ಅವರು ಮಾತನಾಡಿ ಹಿಂದುಳಿದ ವರ್ಗದ ಸಂಶೋಧಕರುಗಳಿಗೂ, ಸಾಮಾನ್ಯ ವರ್ಗದ ಸಂಶೋಧಕರುಗಳಿಗೂ ಶಿಷ್ಯವೇತನವನ್ನು ನೀಡಿ, ಆದರೆ ಪ್ರಸ್ತುತ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವನ್ನು ಪರಿಶಿಷ್ಟ ಜಾತಿ/ಪಂಗಡದ ಸಂಶೋಧಕರುಗಳಿಗೆ ನೀಡುವಂತೆ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಈಗಾಗಲೇ ವಿಶ್ವವಿದ್ಯಾನಿಲಯದಿಂದ ಸಂಶೋಧಕರುಗಳಿಗೆ ನೀಡಿರುವ ಶಿಷ್ಯವೇತನದ ಮೊತ್ತವು ನಮಗೆ ಈಗ ಸರ್ಕಾರದಿಂದ ಬಿಡುಗಡೆಯಾಗಿರುವಂತದ್ದು, ಆದ್ದರಿಂದ ವಿಶ್ವವಿದ್ಯಾನಿಲಯವು ಈ ಮೊತ್ತವನ್ನು ಮರುಭರಿಕೆ ಮಾಡಿಕೊಳ್ಳಬೇಕಾಗುತ್ತದೆ ಎಂದು ತಿಳಿಸಿದರು. ಜೊತೆಗೆ ಎಲ್ಲಾ ವಿದ್ಯಾರ್ಥಿಗಳನ್ನು ಒಂದೇ ದೃಷ್ಟಿಕೋನದಿಂದ ನೋಡಬೇಕಾಗುತ್ತದೆ ಎಂದು ತಿಳಿಸಿದರು.

ಡಾ. ಬಸವರಾಜು ಸಿ. ಅವರು ಮಾತನಾಡಿ ಎಲ್ಲಾ ವಿದ್ಯಾರ್ಥಿಗಳನ್ನು ಸಮಾನತೆಯಿಂದ ನೋಡಬೇಕಾಗುತ್ತದೆ. ಅವರುಗಳನ್ನು ವಿಭಜಿಸುವುದು ಒಳಿತಲ್ಲವೆಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಹಿಂದುಳಿದ ವಿದ್ಯಾರ್ಥಿಗಳ ಸಮಿತಿ ಸಭೆಯಲ್ಲಿ ಪರಿಶಿಷ್ಟ ಜಾತಿ /ಪಂಗಡದ ವಿದ್ಯಾರ್ಥಿಗಳಿಗೆ ರೂ.23,000/-ಗಳನ್ನು ನೀಡುತ್ತಿದ್ದೀರ, ಆದರೆ ಹಿಂದುಳಿದ ವಿದ್ಯಾರ್ಥಿಗಳಿಗೆ ರೂ.12,000/-ಗಳನ್ನು ನೀಡಲಾಗುತ್ತಿದೆ ಇದು ಹೇಗೆ ಎಂದು ಪ್ರಶ್ನಿಸಿದಾಗ ಅಲ್ಲಿದ್ದ ಅಧಿಕಾರಿಗಳು ಸಮಾಜ ಕಲ್ಯಾಣ ಇಲಾಖೆಯಿಂದ ಶಿಷ್ಯವೇತನಕ್ಕಾಗಿ ತಲಾ ರೂ. 10,000/-ಗಳನ್ನು ನೀಡಲಾಗುತ್ತಿದ್ದು, ಸಮಾಜ ಕಲ್ಯಾಣ ಇಲಾಖೆಯಿಂದ ಅನುದಾನ ಬಿಡುಗಡೆಯಾದ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯಕ್ಕೆ ಮರುಭರಿಕೆ ಮಾಡಿಕೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ. ವಿಶ್ವವಿದ್ಯಾನಿಲಯದಿಂದ ಇಂತಿಷ್ಟೇ ಮೊತ್ತವನ್ನು ನಿಗದಿಪಡಿಸಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ಡಾ. ಬಸವರಾಜು ಸಿ. ಅವರು ಮಾತನಾಡಿ ವಿದ್ಯಾರ್ಥಿಗಳಿಂದಲೇ ವಿಶ್ವವಿದ್ಯಾನಿಲಯವು ನಡೆಯುತ್ತಿರುವುದರಿಂದ ಅವರುಗಳಿಗೆ ವಿದ್ಯಾರ್ಥಿವೇತನವನ್ನು ವಿಶ್ವವಿದ್ಯಾನಿಲಯವು ನೀಡಬೇಕಾಗುತ್ತದೆ. ಜೊತೆಗೆ ವಿದ್ಯಾರ್ಥಿಗಳಲ್ಲಿ ಸಮಾನತೆಯನ್ನು ವಿಶ್ವವಿದ್ಯಾನಿಲಯದ ಮಟ್ಟದಲ್ಲೇ ಮಾಡಲಿಲ್ಲವೆಂದಾದರೆ ಹೊರಗಡೆ ನಾವು ಸಮಾನತೆಯನ್ನು ತರಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಸಮಾಜ ಕಲ್ಯಾಣ ಇಲಾಖೆಯಿಂದ ರೂ.10,000/-ಗಳ ಅನುದಾನವು ದೊರಕುತ್ತಿರುವುದರಿಂದ ಪರಿಶಿಷ್ಟ ಜಾತಿ /ಪಂಗಡದ ಸಂಶೋಧಕರುಗಳಿಗೆ ರೂ.23,000/-ಗಳ ಶಿಷ್ಯವೇತನ ದೊರಕುತ್ತಿದೆ. ಇಲ್ಲವಾದಲ್ಲಿ ವಿಶ್ವವಿದ್ಯಾನಿಲಯದಲ್ಲಿ ನೀಡುತ್ತಿರುವ ಶಿಷ್ಯವೇತನವು ರೂ.13,000/- ಪರಿಶಿಷ್ಟ ಜಾತಿ/ಪಂಗಡದ ಸಂಶೋಧಕರುಗಳಿಗೆ ಹಾಗೂ ರೂ.12,000/- ಹಿಂದುಳಿದ ವಿದ್ಯಾರ್ಥಿಗಳಿಗೆ ದೊರಕುತ್ತಿತ್ತು ಎಂದು ತಿಳಿಸಿದರು. ಜೊತೆಗೆ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ರೂ.33,000/-ಗಳನ್ನು ನೀಡುತ್ತಿದ್ದೇವೆ ಆದರೆ ಅತಿಥಿ ಉಪನ್ಯಾಸಕರುಗಳಿಗೆ

| | |
|---|---|
| | ರೂ.28,000/-ಗಳನ್ನು ನೀಡಲಾಗುತ್ತಿದೆ ಇದು ಎಷ್ಟು ಸಮಂಜಸ ಎಂಬುದು ಪ್ರಶ್ನೆಯಾಗುತ್ತದೆ ಎಂದು ತಿಳಿಸಿದರು.<br><br>ಶ್ರೀ ನಟರಾಜು ಎಚ್.ಎಸ್. ಅವರು ಮಾತನಾಡಿ ಜೆಆರ್‌ಎಫ್ ವಿದ್ಯಾರ್ಥಿಗಳಿಗೆ ರೂ.40,000/-ಗಳ ಮೇಲೆ ಶಿಷ್ಯವೇತನ ದೊರಕುತ್ತಿದೆ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಶಿಷ್ಯವೇತನವನ್ನು ಎಷ್ಟು ವರ್ಷಗಳ ಅವಧಿಗೆ ನೀಡಲಾಗುತ್ತಿದೆ ಎಂದು ಕೇಳಿದರು.<br><br>ಮಾನ್ಯ ಕುಲಪತಿಗಳು ಶಿಷ್ಯವೇತನವನ್ನು ಮೊದಲು ಮೂರು ವರ್ಷಗಳಿಗೆ ನಿಗಧಿಪಡಿಸಲಾಗಿತ್ತು, ನಂತರ ಐದು ವರ್ಷಗಳಿಗೆ ನಿಗಧಿಪಡಿಸಲಾಗಿದೆ ಎಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ. ಅವರು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಹೆಚ್ಚು ವಿದ್ಯಾರ್ಥಿಗಳು ಬಡತನದ ರೇಖೆಯಲ್ಲಿ ಬಂದವರಾಗಿದ್ದು, ಅವರುಗಳು ಶಿಷ್ಯವೇತನದಿಂದಲೇ ತಮ್ಮ ವ್ಯಾಸಂಗವನ್ನು ಮಾಡುತ್ತಿರುತ್ತಾರೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ನಮ್ಮ ವಿಶ್ವವಿದ್ಯಾನಿಲಯದಲ್ಲೇ ಹೆಚ್ಚಿನ ಮೊತ್ತದ ಶಿಷ್ಯವೇತನವನ್ನು ನೀಡಲಾಗುತ್ತಿದೆ ಹಾಗೂ ಹೆಚ್ಚಿನ ವಿದ್ಯಾರ್ಥಿಗಳು/ಸಂಶೋಧನಾ ವಿದ್ಯಾರ್ಥಿಗಳು ನಮ್ಮ ವಿಶ್ವವಿದ್ಯಾನಿಲಯದಲ್ಲೇ ಇರುವುದು ಎಂದು ತಿಳಿಸಿ, ನಮಗೆ ಮುಖ್ಯವಾದ ಸಂಗತಿಯೆಂದರೆ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿ.<br><br>ಶ್ರೀ ನಟರಾಜು ಎಚ್.ಎಸ್. ಅವರು ಮಾತನಾಡಿ ಸಮಾಜ ಕಲ್ಯಾಣ ಇಲಾಖೆಯಿಂದ ನೀಡುತ್ತಿರುವ ಅನುದಾನವು ಎಸ್‌ಸಿಎಸ್‌ಟಿ ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ನೀಡುತ್ತಿರುವ ಹಣವಾಗಿರುವುದರಿಂದ ರೂ. 10,000/-ಗಳ ಮೊತ್ತವನ್ನು ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳಿಗೆ ನೀಡಲೇಬೇಕಾಗುತ್ತದೆ. ಹಾಗೂ ರೂ.23,000/-ಗಳನ್ನು ವಿಶ್ವವಿದ್ಯಾನಿಲಯದಿಂದ ಭರಿಸಬೇಕಾಗುತ್ತದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ರೂ.13,000/-ಗಳನ್ನು ಮಾತ್ರ ವಿಶ್ವವಿದ್ಯಾನಿಲಯದಿಂದ ಭರಿಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ರೂ.10,000/-ಗಳು ಹಾಗೂ ರೂ.13,000/-ಗಳನ್ನು ಸೇರಿಸಿ ಒಟ್ಟು ರೂ.23,000/-ಗಳ ಶಿಷ್ಯವೇತನವನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು.<br><br>ಶ್ರೀ ನಟರಾಜು ಎಚ್.ಎಸ್. ಅವರು ಮಾತನಾಡಿ ಎಲ್ಲಿಯೂ ಇದರ ಉಲ್ಲೇಖವಾಗಿರುವುದಿಲ್ಲ. ರೂ.23,000/-ಗಳನ್ನು ವಿಶ್ವವಿದ್ಯಾನಿಲಯದಿಂದ ರೂ. 10,000/-ಗಳನ್ನು ಸಮಾಜ ಕಲ್ಯಾಣ ಇಲಾಖೆಯ ಅನುದಾನದಿಂದ ಒಟ್ಟು ರೂ.33,000/-ಗಳನ್ನು ನೀಡಬೇಕಾಗುತ್ತದೆ, ರೂ. 13,000/-ಗಳೆಂದು ಎಲ್ಲಿಯಾದರೂ ಉಲ್ಲೇಖವಾಗಿದೆಯೇ ಎಂದು ಸಭೆಯಲ್ಲಿ ಕೇಳಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಹಿಂದೆ ನಡೆದಂತಹ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನವಾದಂತೆ ಶಿಷ್ಯವೇತನವನ್ನು ಈಗಾಗಲೇ ವಿಶ್ವವಿದ್ಯಾನಿಲಯವು ನೀಡಿದೆ. ಜೊತೆಗೆ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳಿಗೆ ನೀಡಿರುವ ಹಣವು ಹಿಂದುಳಿದ ವಿದ್ಯಾರ್ಥಿಗಳಿಂದ ಪ್ರವೇಶಾತಿ ಶುಲ್ಕವಾಗಿ ಪಡೆದಿರುವ ಮೊತ್ತದಿಂದ ಶಿಷ್ಯವೇತನವನ್ನು ನೀಡಲಾಗಿದೆ. ಈ ಹಣವು ಯಾವುದೇ ಸರ್ಕಾರದಿಂದಾಗಲಿ, ಸಂಸ್ಥೆಯಿಂದಾಗಲಿ ಹಾಗೂ ಇತರರಿಂದ ಸ್ವೀಕರಿಸಿದ ಹಣವಾಗಿರುವುದಿಲ್ಲವೆಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ. ಅವರು ಮಾತನಾಡಿ ಹಿಂದೆ ಶ್ರೀ ಮಹೇಶ್ ಅವರು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳು, ಸಂಶೋಧಕರುಗಳು ಸಚಿವರಿಗೆ ಮನವಿ ಮಾಡಿಕೊಂಡಂತ ಪ್ರತಿಯನ್ನು ತಮಗೂ ಸಹ ನೀಡಿರುವುದಾಗಿ ತಿಳಿಸಿದರು. |

ಮಾನ್ಯ ಕುಲಪತಿಗಳು ಮಾತನಾಡಿ ವಿಶ್ವವಿದ್ಯಾನಿಲಯದ ಎಲ್ಲಾ ವಿದ್ಯಾರ್ಥಿಗಳು ಇಲ್ಲಿ ಒಂದೇ. ನಮ್ಮ ಆಂತರಿಕ ಬೊಕ್ಕಸದ ಹಣವನ್ನು ವಿದ್ಯಾರ್ಥಿಗಳಿಗೆ/ಸಂಶೋಧಕರುಗಳಿಗೆ ನೀಡಿರುವಂತಹದ್ದು. ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳಿಗೆ ರೂ.23,000/-ಗಳು ಹಾಗೂ ರೂ.10,000/-ಗಳ ಶಿಷ್ಯವೇತನವನ್ನು ನೀಡಿ, ಹಿಂದುಳಿದ ವಿದ್ಯಾರ್ಥಿಗಳಿಗೆ ರೂ.12,000/-ಗಳ ಶಿಷ್ಯವೇತನವನ್ನು ನೀಡುವುದು ಎಷ್ಟು ಸಮಂಜಸವೆಂದು ಸಭೆಯಲ್ಲಿ ಮರುಪ್ರಶ್ನಿಸಿದರು.

ಶ್ರೀ ನಾಗರಾಜು ಸಿ. ಅವರು ಮಾತನಾಡಿ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಹಣವನ್ನು ಮಾತ್ರ ತಾವು ನೀಡುತ್ತಿರುವುದು ಎಂದು ತಿಳಿಸಿದರು.

ಶ್ರೀ ನಾಗರಾಜು ಸಿ.ಅವರು ಮಾತನಾಡಿ ಶಿಷ್ಯವೇತನವಲ್ಲದೆ, ವಿದ್ಯಾರ್ಥಿ ವೇತನವನ್ನು ಒಂದನೇ ತರಗತಿಯಿಂದ ಮಾಸ್ಟರ್ ಡಿಗ್ರಿಯವರೆಗೂ ಓಬಿಸಿ ಅವರಿಗೆ ಬೇರೆ ವಿದ್ಯಾರ್ಥಿ ವೇತನ, ಸಾಮಾನ್ಯವರ್ಗದವರಿಗೆ ಬೇರೆ ವಿದ್ಯಾರ್ಥಿ ವೇತನ ಹಾಗೆಯೇ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಬೇರೆ ವಿದ್ಯಾರ್ಥಿ ವೇತನವಿದೆ. ಆದ್ದರಿಂದ ವಿದ್ಯಾರ್ಥಿ ವೇತನದಲ್ಲಿ ಯಾವುದೇ ಸಾಮ್ಯತೆ, ಸಮಾನತೆ ಇರುವುದಿಲ್ಲ.

ಡಾ. ಬಸವರಾಜು ಸಿ. ಅವರು ಮಾತನಾಡಿ ತಾವು ಹೇಳುತ್ತಿರುವುದು ಈಗ ಸರ್ಕಾರದಿಂದ ಬಿಡುಗಡೆಯಾಗಿರುವ ರೂ. 2.75 ಕೋಟಿ ಶಿಷ್ಯವೇತನದ ಮೊತ್ತವನ್ನು ಈಗಾಗಲೇ ಸಂಶೋಧಕರುಗಳಿಗೆ ನೀಡಿರುವುದರಿಂದ, ಈ ಮೊತ್ತವನ್ನು ವಿಶ್ವವಿದ್ಯಾನಿಲಯಕ್ಕೆ ಮರುಭರಿಕೆ ಮಾಡಿಕೊಂಡು ಮುಂದೆ ಶಿಷ್ಯವೇತನವನ್ನು ನೀಡಬೇಕಾದಲ್ಲಿ ಈ ಹಣವನ್ನು ಬಳಸಿಕೊಂಡು ಸರ್ಕಾರದಿಂದ ಅನುದಾನ ಬಿಡುಗಡೆಯಾದ ನಂತರ ವಿಶ್ವವಿದ್ಯಾನಿಲಯಕ್ಕೆ ಮರುಭರಿಕೆ ಮಾಡಿಕೊಳ್ಳಲಾಗುವುದು ಎಂಬುದು ನಿಮ್ಮ ವಾದವೇಎಂದು ಕೇಳಿದರು.

ಶ್ರೀ ನಟರಾಜು ಎಚ್.ಎಸ್. ಅವರು ಮಾತನಾಡಿ 2018ರಲ್ಲಿ ಶಿಷ್ಯವೇತನದ ಪರಿಷ್ಕರಣೆಯಾಗಿದೆ. ಜೆಆರ್‌ಎಫ್ ನವರಿಗೆ ರೂ.23,200/- ಹಾಗೂ ಎಸ್‌ಆರ್‌ಎಫ್ ನವರಿಗೆ ರೂ.25,000/-ಗಳು. ಎಸ್‌ಎಸ್‌ಪಿ ಟಿಪಿಎಸ್‌ನ ಹಣ ಬಂದಿರುವುದು 2022-23ನೇ ಸಾಲಿನದು.ಇನ್ನು ನಾಲ್ಕುವರ್ಷದ ಹಣವನ್ನು ನೀವು ಹೇಗೆ ಭರಿಸಿದ್ದೀರಿ ಎಂದು ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ವಿಶ್ವವಿದ್ಯಾನಿಲಯದಿಂದ ಸಮಾಜಕಲ್ಯಾಣ ಇಲಾಖೆಗೆ ಶಿಷ್ಯವೇತನಕ್ಕಾಗಿ ಭರಿಸಿರುವ ಮೊತ್ತವನ್ನು ಬಿಡುಗಡೆ ಮಾಡುವಂತೆ ಪತ್ರವನ್ನು ಬರೆಯಲಾಗಿದೆ. ಆದರೆ ಅಲ್ಲಿಂದ ನಮಗೆ ಇನ್ನೂ ಹಣ ಬಿಡುಗಡೆಯಾಗಿಲ್ಲ. ಸಮಾಜ ಕಲ್ಯಾಣ ಇಲಾಖೆಯಿಂದ ನಮಗೆ ರೂ.9.50 ಕೋಟಿ ಹಣ ಬಿಡುಗಡೆಯಾಗಬೇಕಾಗಿದೆ. ಸಮಾಜ ಕಲ್ಯಾಣ ಇಲಾಖೆಯಿಂದ ಅನುದಾನವನ್ನು ಬಿಡುಗಡೆ ಮಾಡುತ್ತಾರೆ ಎಂಬ ನಿರೀಕ್ಷೆಯಿಂದ ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳಿಗಾಗಿ/ಸಂಶೋಧಕರುಗಳಿಗಾಗಿ ಶಿಷ್ಯವೇತನವನ್ನು ನೀಡಲಾಗಿದೆ. ಪ್ರಸ್ತುತ ವಿಶ್ವವಿದ್ಯಾನಿಲಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿರುವುದರಿಂದ ಮರುಭರಿಕೆ ಮಾಡಿಕೊಳ್ಳಲೇಬೇಕಾಗಿದೆ ಎಂದು ಸಭೆಗೆ ತಿಳಿಸಿದರು.

ಶ್ರೀ ನಾಗರಾಜು ಸಿ. ಅವರು ಮಾತನಾಡಿ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವನ್ನು ನಾವು ಬೇರೆಯ ಕಾರಣಕ್ಕಾಗಿ ವಿಶ್ವವಿದ್ಯಾನಿಲಯವು ಉಪಯೋಗಿಸುವಂತಿಲ್ಲ. ವಿದ್ಯಾರ್ಥಿಗಳಿಗಾಗಿ/ಸಂಶೋಧಕರುಗಳಿಗಾಗಿಯೇ ಉಪಯೋಗಿಸ ಬೇಕಾಗುತ್ತದೆ. ಆದುದರಿಂದ ಈ ಹಣವನ್ನು ದುರ್ಬಳಕೆ ಮಾಡಿಕೊಳ್ಳುವಂತಿಲ್ಲವೆಂದು ತಿಳಿಸಿ, ಹಾಗೂ ವಿದ್ಯಾರ್ಥಿಗಳಿಗೆ ಸರ್ಕಾರದ ಮಟ್ಟದಲ್ಲಿ ಓಡಾಡಿ ಅನುದಾನವನ್ನು ಬಿಡುಗಡೆ ಮಾಡಿಸಿರುತ್ತಾರೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ವಿಷಯವನ್ನು ಸರಿಯಾಗಿ ಅರ್ಥೈಸಿಕೊಳ್ಳದೆ ಸಭೆಯಲ್ಲಿ ಮಾತನಾಡುವುದು ತಪ್ಪಾಗುತ್ತದೆ. ಜೊತೆಗೆ ಒಟ್ಟು ಅನುದಾನದ ಮೊತ್ತ ರೂ.9.00 ಕೋಟಿಗೂ ಅಧಿಕವಾದ ಅನುದಾನ ಸರ್ಕಾರದಿಂದ ಬರಬೇಕಾಗಿದೆ. ಪ್ರಸ್ತುತ ನಮಗೆ ರೂ.2.75 ಕೋಟಿ ಬಿಡುಗಡೆಯಾಗಿದೆ. ವಿಶ್ವವಿದ್ಯಾನಿಲಯವು ಸಮಾಜ ಕಲ್ಯಾಣ ಇಲಾಖೆಗೆ ಪತ್ರವನ್ನು ಬರೆಯುವುದರ ಜೊತೆಗೆ ಮುಖ್ಯಮಂತ್ರಿಗಳಿಗೂ ಪತ್ರವನ್ನು ಬರೆದು ಖುದ್ದಾಗಿ

| | |
|---|---|
| | ಅಧಿಕಾರಿಗಳೊಂದಿಗೆ ಮಾತನಾಡಲಾಗಿದೆ. ವಿದ್ಯಾರ್ಥಿಗಳೊಬ್ಬರೇ ಈ ವಿಷಯದಲ್ಲಿ ಪ್ರಯತ್ನಪಟ್ಟಿರುವುದಿಲ್ಲ. ವಿಶ್ವವಿದ್ಯಾನಿಲಯದ ವತಿಯಿಂದಲೂ ಸಹ ಅನುದಾನವನ್ನು ಬಿಡುಗಡೆ ಮಾಡಿಸಲು ಪ್ರಯತ್ನಪಟ್ಟಿದ್ದೇವೆ ಎಂದು ತಿಳಿಸಿದರು.<br><br>ಶ್ರೀ ನಟರಾಜು ಹೆಚ್.ಎಸ್. ಅವರು ಮಾತನಾಡಿ 2014ರಿಂದ ಬಿಡುಗಡೆಯಾಗದ ಅನುದಾನವು ಈಗ ಬಿಡುಗಡೆಯಾಗಿದೆ. ಕಾಯಿದೆ ಜಾರಿಗೆ ಬಂದಿರುವುದು 2014ರಲ್ಲಿ. ನಾವು ಮನವಿ ಕೊಟ್ಟ ನಂತರ 2022-23ನೇ ಸಾಲಿನಲ್ಲಿ ಅನುದಾನವು ಬಂದಿದೆ. ವಿಶ್ವವಿದ್ಯಾನಿಲಯದಿಂದ ಶಿಷ್ಯವೇತನಕ್ಕಾಗಿ ತಾವು ನೀಡಿರುವ ರೂ.10,000/-ಗಳಿಗೆ ಯಾವುದೇ ದಾಖಲೆಯಿರುವುದಿಲ್ಲ. ಆದ್ದರಿಂದ ತಮಗೆ ಹೆಚ್ಚಿನ ಹಣ ಬೇಕಾದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಬಿಡುಗಡೆ ಮಾಡಿಸಿಕೊಳ್ಳಿ ಎಂದು, ಪ್ರಸ್ತುತ ಬಿಡುಗಡೆಯಾಗಿರುವ ಅನುದಾನವನ್ನು ಸಂಶೋಧನೆಗಾಗಿ ಎಂದು ತಿಳಿಸಿರುವುದರಿಂದ ಸಂಶೋಧಕರುಗಳಿಗೆ ನೀಡಬೇಕೆಂದು ಆಗ್ರಹಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಪ್ರಸ್ತುತ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವನ್ನು ಮರುಭರಿಕೆ ಮಾಡಿಕೊಳ್ಳಲು ಆಗದಿದ್ದಲ್ಲಿ ವಿಶ್ವವಿದ್ಯಾನಿಲಯದಲ್ಲಿ ಯಾವ ರೀತಿಯ ಕ್ರಮವನ್ನು ಅನುಸರಿಸಬೇಕಾಗುತ್ತದೆ ಎಂಬುದರ ಬಗ್ಗೆ ಹಾಗೆಯೇ ವಿಶ್ವವಿದ್ಯಾನಿಲಯವು ಪ್ರತಿ ವರ್ಷ 20 ಮಂದಿಗೆ ಶಿಷ್ಯವೇತನವನ್ನು ನೀಡಲಾಗುತ್ತಿತ್ತು. ಆದರೆ 200ಕ್ಕಿಂತ ಹೆಚ್ಚಿನ ಸಂಶೋಧಕರುಗಳಿಗೆ ಶಿಷ್ಯವೇತನವನ್ನು ನೀಡಬೇಕಾಗಿದೆ ಜೊತೆಗೆ ಐದು ವರ್ಷಗಳವರೆಗೂ ಶಿಷ್ಯವೇತನವನ್ನು ನಿಡಬೇಕಾಗಿರುತ್ತದೆ. ಪ್ರತಿ ವರ್ಷ ರೂ.8.00 ಕೋಟಿಯಷ್ಟು ಮೊತ್ತವನ್ನು ವಿಶ್ವವಿದ್ಯಾನಿಲಯವು ಶಿಷ್ಯವೇತನಕ್ಕಾಗಿ ಭರಿಸಬೇಕಾಗುತ್ತದೆ. ಯಾವ ವಿಶ್ವವಿದ್ಯಾನಿಲಯವು ಶಿಷ್ಯವೇತನಕ್ಕಾಗಿ ಇಷ್ಟು ದೊಡ್ಡ ಮೊತ್ತವನ್ನು ಖರ್ಚು ಮಾಡುತ್ತಿಲ್ಲ. ಪ್ರಸ್ತುತ ವಿಶ್ವವಿದ್ಯಾನಿಲಯವು ಇಷ್ಟು ದೊಡ್ಡ ಮೊತ್ತವನ್ನು ಶಿಷ್ಯವೇತನಕ್ಕಾಗಿ ಭರಿಸಲು ಆರ್ಥಿಕವಾಗಿ ಕಷ್ಟಕರವಾಗಿದೆ. ಆದ್ದರಿಂದ ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ ಎಂದು ಸಭೆಗೆ ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವನ್ನು ಹೊಂದಾಣಿಕೆ ಮಾಡಿಕೊಳ್ಳಲು ಸಾಧ್ಯವಾಗದಿದ್ದಲ್ಲಿ ಇನ್ನು ಮುಂದೆ ಸರ್ಕಾರವು ಅನುದಾನವನ್ನು ಬಿಡುಗಡೆ ಮಾಡುವತನಕ ವಿಶ್ವವಿದ್ಯಾನಿಲಯದಿಂದ ಕೊಡಮಾಡುವ ರೂ.13,000/-ಗಳನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಹಾಗೂ ರೂ.12,000/-ಗಳನ್ನು ಹಿಂದುಳಿದ ವಿದ್ಯಾರ್ಥಿಗಳಿಗೆ ನೀಡಲು ಕ್ರಮವಹಿಸಿ, ಉಳಿಕೆ ರೂ. 10,000/-ಗಳ ಮೊತ್ತವನ್ನು ಸರ್ಕಾರದಿಂದ ಅನುದಾನ ಬಿಡುಗಡೆ ಆದನಂತರವೇ ಪರಿಶಿಷ್ಟ ಜಾತಿ/ಪಂಗಡದವರಿಗೆ ಭರಿಸುವುದು ಸೂಕ್ತವೆಂದು ತಿಳಿಸಿದರು. ಈಗಾಗಲೇ ಭರಿಸಿರುವ ಮೊತ್ತವನ್ನು ಮರುಭರಿಕೆ ಮಾಡಲು ಅವಕಾಶ ನೀಡದಿದ್ದಲ್ಲಿ ಇನ್ನು ಮುಂದೆ ಸರ್ಕಾರದಿಂದ ಬಿಡುಗಡೆ ಆದ ನಂತರವೆ ಭರಿಸುವುದು ಸೂಕ್ತವೆಂದು ತಿಳಿಸಿದರು.<br><br>ಮುಂದುವರೆದು, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಹಾಗೂ ಹಿಂದೆ ಇದ್ದಂತಹ ಕುಲಪತಿಗಳಾಗಲಿ ಅಧಿಕಾರಿಗಳಾಗಲಿ ವಿದ್ಯಾರ್ಥಿಗಳ ಸಂಶೋಧನಾಕಾರ್ಯದ ಹಿತದೃಷ್ಟಿಯಿಂದ ರೂ.13,000/-ಗಳ ಜೊತೆಗೆ ಮುಂದೆ ಸರ್ಕಾರದಿಂದ ಅನುದಾನವು ಬಿಡುಗಡೆಯಾಗಬಹುದೆಂಬ ಉದ್ದೇಶದಿಂದ ರೂ.10,000/-ಗಳ ಶಿಷ್ಯವೇತನದ ಮೊತ್ತವನ್ನು ಮೊದಲೇ ನೀಡಿರುವುದನ್ನು ಈಗ ಮರುಭರಿಕೆ ಮಾಡಲು ಸಾಧ್ಯವಾಗುವುದಿಲ್ಲವೆಂದಾದರೆ ಮೊದಲು ನೀಡುವುದೇ ಬೇಡ, ಅನುದಾನ ಬಿಡುಗಡೆಯಾದ ನಂತರವೇ ಶಿಷ್ಯವೇತನವನ್ನು ನೀಡುವುದು ಒಳಿತು ಎಂದು ತಿಳಿಸಿದರು. ಜೊತೆಗೆ ಅತಿಥಿ ಉಪನ್ಯಾಸಕರುಗಳಿಗೆ ರೂ. 28,000/-ಗಳ ವೇತನವನ್ನು ನಿಗಧಿಪಡಿಸಿ, ಸಂಶೋಧನಾ ವಿದ್ಯಾರ್ಥಿಗಳಿಗೆ ರೂ.33,000/-ಗಳವರೆಗೆ ಶಿಷ್ಯವೇತನವನ್ನು ನೀಡುವುದು ಎಷ್ಟು ಸಮಂಜಸವೆಂದು? ಸಭೆಯಲ್ಲಿ ಕೇಳಿದರು. ಅತಿಥಿ ಉಪನ್ಯಾಸಕರುಗಳು ಡಾಕ್ಟೊರೇಟ್ ಪಡೆದು, ಬೆಳಗ್ಗೆಯಿಂದ ಸಂಜೆಯವರೆಗೂ ವಿದ್ಯಾರ್ಥಿಗಳಿಗಾಗಿ ಉಪನ್ಯಾಸನವನ್ನು ನೀಡಿದವರಿಗೆ ರೂ.28000/-ಗಳ |

| | |
|---|---|
| | ವೇತನವನ್ನು ನೀಡುವುದು ಸರಿಯೇ ಎಂದು ಪ್ರಶ್ನಿಸುವುದರಲ್ಲಿ ಯಾವುದೇ ಉತ್ಪ್ರೇಕ್ಷೆ ಇರುವುದಿಲ್ಲ ಎಂದು ತಿಳಿಸಿದರು.<br><br>ಶ್ರೀ ಹೆಚ್.ಎಸ್. ನಟರಾಜು ಅವರು ಮಾತನಾಡಿ ಅತಿಥಿ ಉಪನ್ಯಾಸಕರ ವೇತನಕ್ಕೂ ಸಂಶೋಧನಾ ವಿದ್ಯಾರ್ಥಿಗಳಿಗೆ ನೀಡುವ ಶಿಷ್ಯವೇತನಕ್ಕೂ ತಾಳೆಹಾಕುವುದು ಬೇಡವೆಂದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಸಂಶೋಧನಾ ವಿದ್ಯಾರ್ಥಿಗಳಿಗೆ ಈಗಾಗಲೇ ಶಿಷ್ಯವೇತನವನ್ನು ನೀಡಿರುವುದರಿಂದ ತಾವು ಬಿಡುಗಡೆ ಮಾಡಿರುವ ಅನುದಾನವನ್ನು ವಿಶ್ವವಿದ್ಯಾನಿಲಯಕ್ಕೆ ಮರುಭರಿಕೆ ಮಾಡಿಕೊಳ್ಳಲು ಅನುಮತಿ ನೀಡಬೇಕೆಂದು ಸರ್ಕಾರಕ್ಕೆ ಒಂದು ಪತ್ರ ಬರೆದು ಅನುಮೋದನೆಯನ್ನು ಪಡೆಯುವುದು. ಇಲ್ಲವಾದಲ್ಲಿ ಸರ್ಕಾರವು ನೀವು ಮುಂಚಿತವಾಗಿ ನೀಡಿರುವ ಶಿಷ್ಯವೇತನವನ್ನು ಪರಿಗಣಿಸುವುದಿಲ್ಲ ಎಂದಾದಲ್ಲಿ ಮುಂದೆ ಸರ್ಕಾರ ಬಿಡುಗಡೆ ಮಾಡುವ ಅನುದಾನಕ್ಕೆ ಮುಂಚಿತವಾಗಿ ಶಿಷ್ಯವೇತನವನ್ನು ನೀಡುವ ಕ್ರಮವನ್ನು ಕೈಬಿಡುವುದು ಒಳಿತು ಎಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ. ಅವರು ಮಾತನಾಡಿ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೋಸ್ಕರ ಎಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಶಿಷ್ಯವೇತನದ ಅನುದಾನದ ಮೊತ್ತವನ್ನು ಹೊಂದಾಣಿಕೆ ಮಾಡಿಕೊಳ್ಳಬಾರದೆಂದು ಯಾವ ಸರ್ಕಾರವೂ ಹೇಳುವುದಿಲ್ಲ. ವಿಶ್ವವಿದ್ಯಾನಿಲಯವು ಈಗಾಗಲೇ ನೀಡಿರುವ ಶಿಷ್ಯವೇತನದ ಮೊತ್ತವನ್ನು ಮರುಭರಿಕೆ ಮಾಡಿಕೊಳ್ಳಲು ಅವಕಾಶ ನೀಡದೆ ಇರುವುದು ಎಷ್ಟು ಸರಿ ಎಂದು ಕೇಳಿದರು. ಜೊತೆಗೆ ಸಿಂಡಿಕೇಟ್‌ನಿಂದ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಮಕ್ಕಳಿಗೆ ಯಾವುದೇ ಅನ್ಯಾಯವಾಗುವುದು ಬೇಡ. ಆದರೆ ಹಿಂದೆ ಇದ್ದಂತಹ ಅಧಿಕಾರಿಗಳು ಮುಂದೆ ಸರ್ಕಾರದಿಂದ ಅನುದಾನವು ಬಿಡುಗಡೆಯಾದಾಗ ಮರುಭರಿಕೆ ಅಥವಾ ಹೊಂದಾಣಿಕೆ ಮಾಡಿಕೊಳ್ಳುವುದು ಸರಿಯಲ್ಲ, ತಪ್ಪು ಎಂದಾದರೆ ಹೇಗೆ ಎಂದು ಕೇಳಿದರು.<br><br>ಶ್ರೀ ನಾಗರಾಜು ಸಿ. ಅವರು ಮಾತನಾಡಿ ಶಿಷ್ಯವೇತನವನ್ನು ಈಗಾಗಲೇ ನೀಡಿರುವುದರ ಬಗ್ಗೆ ನಮಗೆ ಅರಿವಿದೆ. ಆದರೆ ಪ್ರಸ್ತುತ ಬಿಡುಗಡೆಯಾಗಿರುವಂತಹ ಅನುದಾನವು ಎಸ್‌ಸಿ/ಎಸ್‌ಟಿ ಸಂಶೋಧನಾ ವಿದ್ಯಾರ್ಥಿಗಳಿಗೆ ನೀಡುವಂತಹ ಹಣವಾಗಿರುವುದರಿಂದ ಅವರುಗಳಿಗೆ ಶಿಷ್ಯವೇತನವನ್ನು ನೀಡಬೇಕೆಂದು ತಿಳಿಸಿದರು.<br><br>ಡಾ. ಸಿ. ಬಸವರಾಜು ಅವರು ಮಾತನಾಡಿ ಯಾವ ಮಾನದಂಡದ ಮೇಲೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ರೂ.23,000/-ಗಳನ್ನು ಹಾಗೂ ಒಬಿಸಿ ವಿದ್ಯಾರ್ಥಿಗಳಿಗೆ ರೂ.12,000/-ಗಳನ್ನು ನೀಡಲಾಗುತ್ತಿದೆ ಎಂದು ಕೇಳಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಹಿಂದೆಯಿಂದಲೂ ನಡೆದುಕೊಂಡು ಬಂದಿರುವ ಪ್ರಕ್ರಿಯೆಯ ಆಧಾರದ ಮೇಲೆ ನೀಡಲಾಗುತ್ತಿದೆ ಎಂದು ತಿಳಿಸಿದರು.<br><br>ಡಾ. ಸಿ. ಬಸವರಾಜು ಅವರು ಮಾತನಾಡಿ ನಾವು ಒಬಿಸಿ ವಿದ್ಯಾರ್ಥಿಗಳಿಗೆ ನೀಡುವ ಶಿಷ್ಯವೇತನದ ಬಗ್ಗೆ ಸಮಿತಿ ರಚಿಸುವಂತೆಯೂ ಅವರಿಗೆ ನೀಡುತ್ತಿರುವ ಶಿಷ್ಯವೇತನವನ್ನು ಪರಿಷ್ಕರಿಸುವಂತೆಯೂ ತಿಳಿಸಿದ್ದಾಗ್ಯೂ ಅದನ್ನು ಇನ್ನೂ ಜಾರಿಗೆ ತಂದಿರುವುದಿಲ್ಲ. ಆದ್ದರಿಂದ ಮೊದಲು ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವಂತೆ ತಿಳಿಸಿದರು. ಪ.ಜಾತಿ ಹಾಗೂ ಪ.ಪಂಗಡದವರಿಗೆ ನೀಡುತ್ತಿರುವಂತೆಯೇ ರೂ. 23,000/-ಗಳ ಶಿಷ್ಯವೇತನವನ್ನು ಒಬಿಸಿ ಸಂಶೋಧನಾ ವಿದ್ಯಾರ್ಥಿಗಳಿಗೂ ನೀಡುವಂತೆ ಆಗ್ರಹಿಸಿದರು. ಜೊತೆಗೆ ಒಂದು ಸಮಿತಿಯನ್ನು ರಚಿಸಿ, ಸಮಿತಿಯಲ್ಲಿ ಮಾನದಂಡಗಳನ್ನು ರಚಿಸಿ, ಪ.ಜಾತಿ/ಪ.ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ಹಾಗೂ ಹಿಂದುಳಿದ ವರ್ಗಗಳ ಸಂಶೋಧನಾ ವಿದ್ಯಾರ್ಥಿಗಳಿಗೆ ಸಮಾನತೆಯಲ್ಲಿ ಶಿಷ್ಯವೇತನವನ್ನು ನೀಡುವ ಬಗ್ಗೆ ಕ್ರಮವಹಿಸಬೇಕೆಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಸರ್ಕಾರದಿಂದ ಬಿಡುಗಡೆಯಾಗಿರುವ |

ಅನುದಾನ ರೂ.2.75 ಕೋಟಿಗಳಲ್ಲಿ ಯಾವ ಸಾಲಿಗೆ ಎಂಬುದನ್ನು ತಿಳಿಸಿಲ್ಲವೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಕಾರ್ಯಸೂಚಿಯಲ್ಲಿರುವ ಪುಟ ಸಂಖ್ಯೆ: 276 ರಲ್ಲಿರುವಂತೆ ಸಂಶೋಧನಾ ವಿದ್ಯಾರ್ಥಿಗಳಿಂದ ಮುಚ್ಚಳಿಕೆಯನ್ನು ಬರೆಸಿಕೊಂಡು ನೀಡಲಾಗಿದೆ ಎಂದು ತಿಳಿಸಿದರು. ಮುಂದುವರೆದು, ಸಭೆಯಲ್ಲಿ ಸದರಿ ವಿಷಯದ ಬಗ್ಗೆ ಒಂದು ಸಮಿತಿಯನ್ನು ರಚಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ಸಮಿತಿಯನ್ನು ರಚಿಸಿ, ಸಮಿತಿಯು ಸಮರ್ಪಕವಾಗಿ ಪರಿಶೀಲಿಸಿ, ಚರ್ಚಿಸಿ ವರದಿಯನ್ನು ದಿನಾಂಕ: 18.3.2024ರಂದು (ಸೋಮವಾರ) ನೀಡಿದ ಮೇಲೆ ತೀರ್ಮಾನ ಕೈಗೊಳ್ಳುವುದು ಸೂಕ್ತವೆಂದು ತಿಳಿಸಿದರು. ಹಾಗೆಯೇ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ಒಂದೇ ತೆರನಾಗಿ ನೀಡುವ ಬಗ್ಗೆ ಚಿಂತಿಸಬೇಕಾಗುತ್ತದೆಂದರು.

ಶ್ರೀ ನಟರಾಜು ಹೆಚ್.ಎಸ್. ಅವರು ಮಾತನಾಡಿ ಹಿಂದಿನಿಂದ ಯಾವ ರೀತಿ ಶಿಷ್ಯವೇತನವನ್ನು ನೀಡಲು ಕ್ರಮವಹಿಸುತ್ತಿದ್ದೀರೋ ಅದೇ ರೀತಿ ಕ್ರಮವನ್ನು ಮುಂದುವರಿಸಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಶಿಷ್ಯವೇತನವನ್ನು ಹಿಂದಿನಂತೆಯೇ ನೀಡಲು ನಮ್ಮಲ್ಲಿ ಆಂತರಿಕವಾಗಿ ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆಯಿರಬೇಕು. ಆದರೆ ಪ್ರಸ್ತುತ ಪರಿಸ್ಥಿತಿಯಲ್ಲಿ ಅದು ಸಾಧ್ಯವಿಲ್ಲವೆಂದು, ಸರ್ಕಾರದಿಂದ ಅನುದಾನವನ್ನು ನೀಡಿದರೆ ಯಾವುದೇ ತೊಂದರೆಯಿರುವುದಿಲ್ಲ. ಆದರೆ ಸರ್ಕಾರದಿಂದ ಶಿಷ್ಯವೇತನವನ್ನು ಭರಿಸುತ್ತಾರೆ ಎಂದು ವಿಶ್ವವಿದ್ಯಾನಿಲಯದಿಂದ ಕೊಡುತ್ತಿರುವ ರೂ.10,000/-ಗಳು ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆಯಾಗುತ್ತಿದೆ ಎಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ವಿಶ್ವವಿದ್ಯಾನಿಲಯದಿಂದ ನೀಡುತ್ತಿರುವ ಶಿಷ್ಯವೇತನದ ಹಣ ರೂ. 13,000/-ಗಳನ್ನು ಮಾತ್ರ ನೀಡಿ, ಸರ್ಕಾರದಿಂದ ಅನುದಾನದ ಬಿಡುಗಡೆಯಾದ ಸಂದರ್ಭದಲ್ಲಿ ರೂ.10,000/-ಗಳನ್ನು ಸಂಶೋಧನಾ ವಿದ್ಯಾರ್ಥಿಗಳಿಗೆ ನೀಡಿದಾಗ ಸಮಸ್ಯೆಯು ಬಗೆಹರಿಯುವುದು ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಬೇರೆ ವಿಶ್ವವಿದ್ಯಾನಿಲಯಗಳು ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನವಾಗಿ ಎಷ್ಟು ಹಣವನ್ನು ನೀಡುತ್ತಿದ್ದಾರೆ ಎಂಬುದರ ಬಗ್ಗೆ ಮಾಹಿತಿ ಕಲೆ ಹಾಕಲು ತಿಳಿಸಿದರು. ಹಾಗೆಯೇ ಶಿಷ್ಯವೇತನದ ಬಗ್ಗೆ ಸಮಿತಿಯನ್ನು ರಚಿಸಿ, ಆ ಸಮಿತಿಯಲ್ಲಿ ಸಿಂಡಿಕೇಟ್ ಸದಸ್ಯರುಗಳಾದ

| | |
|---|---|
| ಪ್ರೊ. ಶಬ್ಬೀರ್ ಮೊಹಮ್ಮದ್ ಮುಸ್ತಾಫಾ | - ಅಧ್ಯಕ್ಷರು |
| ಶ್ರೀ ಗೋಕುಲ್‌ಗೋವರ್ಧನ್ | - ಸದಸ್ಯರು |
| ಶ್ರೀ ನಾಗರಾಜು ಸಿ. | - ಸದಸ್ಯರು |
| ಡಾ. ಬಸವರಾಜು ಸಿ. | - ಸದಸ್ಯರು |
| ಶ್ರೀ ನಟರಾಜು ಹೆಚ್.ಎಸ್. | - ಸದಸ್ಯರು |
| ಶ್ರೀರೇವಣ್ಣ, ಉಪ ಹಣಕಾಸು ಅಧಿಕಾರಿಗಳು | - ಸದಸ್ಯರು |
| ಎಸ್‌ಸಿ/ಎಸ್‌ಟಿಘಟಕದ ಉಪಕುಲಸಚಿವರು | - ಸದಸ್ಯರು |
| ಓಬಿಸಿ ಘಟಕದ ಸಂಯೋಜಕರು | - ಸದಸ್ಯರು |

ಈ ಸದಸ್ಯರುಗಳ ಜೊತೆಯಲ್ಲಿ ವಿಶ್ವವಿದ್ಯಾನಿಲಯದ ಅಧಿಕಾರಿ ವರ್ಗದವರು ಸಹ ಇರುತ್ತಾರೆಂದು ತಿಳಿಸಿದರು.

ಶ್ರೀ ನಟರಾಜು ಎಚ್.ಎಸ್. ಅವರು ಮಾತನಾಡಿ ಸಮಿತಿಯು ವರದಿಯನ್ನು ಸಮರ್ಪಕವಾಗಿ ನೀಡಲಿ ಅದರ ಬಗ್ಗೆ ನನ್ನ ಅಭ್ಯಂತರವೇನೂ ಇಲ್ಲ, ಆದರೆ ಪ್ರಸ್ತುತ ಬಿಡುಗಡೆಯಾಗಿರುವ ಅನುದಾನವನ್ನು ಸಂಶೋಧನಾ ವಿದ್ಯಾರ್ಥಿಗಳಿಗೆ ಹಂಚಿಕೆಯಾಗಲಿ ಎಂದು ತಿಳಿಸಿದರು.

| | |
|---|---|
| | ಮಾನ್ಯ ಕುಲಪತಿಗಳು ಮಾತನಾಡಿ ಸಮಿತಿಯು ವರದಿಯ ಆಧಾರದ ಮೇಲೆ ಅನುದಾನವನ್ನು ಬಿಡುಗಡೆ ಮಾಡುವುದರ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.<br><br>ಡಾ. ಬಸವರಾಜು ಸಿ.ಅವರು ಮಾತನಾಡಿ ಪ.ಜಾತಿ ಹಾಗೂ ಪ.ಪಂಗಡದವರಿಗೂ ರೂ. 23,000/-ಗಳ ಶಿಷ್ಯವೇತನ ಹಾಗೂ ಓಬಿಸಿ ಸಂಶೋಧನಾ ವಿದ್ಯಾರ್ಥಿಗಳಿಗೂ ರೂ.23,000/-ಗಳ ಶಿಷ್ಯವೇತನವನ್ನು ಸಮಾನವಾಗಿ ನೀಡಿ, ಸರ್ಕಾರದಿಂದ ಅನುದಾನ ಬಿಡುಗಡೆಯಾದ ನಂತರ ರೂ.10,000/-ಗಳನ್ನು ಪ.ಜಾತಿ/ಪ.ಪಂಗಡದವರಿಗೆ ನೀಡಿ ಇದಕ್ಕೆ ನಮ್ಮ ಅಭ್ಯಂತರವೂ ತಾರತಮ್ಯವೂ ಇರುವುದಿಲ್ಲ ಎಂದು ಸಭೆಗೆ ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಪ.ಜಾತಿ ಹಾಗೂ ಪ.ಪಂಗಡದವರಿಗೆ ಸಂಶೋಧನಾ ವಿದ್ಯಾರ್ಥಿಗಳಿಗೆ ರೂ. 33,000/-ಗಳ ಶಿಷ್ಯವೇತನ, ಓಬಿಸಿ ಸಂಶೋಧನಾ ವಿದ್ಯಾರ್ಥಿಗಳಿಗೆ ರೂ.12,000/-ಗಳ ಶಿಷ್ಯವೇತನವನ್ನು ನೀಡಿದಾಗ ತಾರತಮ್ಯ ಉಂಟಾಗುತ್ತದೆ. ಆದ್ದರಿಂದ ಎಸ್‌ಸಿ/ಎಸ್‌ಟಿ ವಿದ್ಯರ್ಥಿಗಳಿಗೆ ರೂ.23,000/- ಹಾಗೂ ಓಬಿಸಿ ಸಂಶೋಧನಾ ವಿದ್ಯಾರ್ಥಿಗಳಿಗೆ ರೂ.23,000/-ಗಳ ಶಿಷ್ಯವೇತನವನ್ನು ನೀಡಿದಾಗ ವಿಶ್ವವಿದ್ಯಾನಿಲಯವು ಪ.ಜಾತಿ ಹಾಗೂ ಪ.ಪಂಗಡದ ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಓಬಿಸಿ ಸಂಶೋಧನಾ ವಿದ್ಯಾರ್ಥಿಗಳನ್ನು ಒಂದೇ ತೆರನಾಗಿ ನೋಡುತ್ತಿದೆ ಎಂದು ಬಿಂಬಿತವಾಗುತ್ತದೆಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ. ಅವರು ಮಾತನಾಡಿ ಪ.ಜಾತಿ ಹಾಗೂ ಪ.ಪಂಗಡದ ವಿದ್ಯಾರ್ಥಿಗಳಿಗೆ ನೀಡುತ್ತಿರುವ ವೇತನದ ಪ್ರಕ್ರಿಯೆಯು ನೆನ್ನೆ ಮೊನ್ನೆಯದಲ್ಲ ವಿದ್ಯಾರ್ಥಿಯು ಒಂದನೇ ತರಗತಿಗೆ ಪ್ರವೇಶಾತಿಯ ಪಡೆಯುವಾಗಿನಿಂದಾಗುವ ಪ್ರಕ್ರಿಯೆಯ ಬಗ್ಗೆ ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ವಿಶ್ವವಿದ್ಯಾನಿಲಯದಿಂದ ನೀಡಿರುವ ರೂ.10,000/-ಗಳ ಶಿಷ್ಯವೇತನವನ್ನು ಮರುಭರಿಕೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡದೆ ಇರುವುದು ಅನ್ಯಾಯವಾಗುತ್ತದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಶಿಷ್ಯವೇತನವನ್ನು ವಿಶ್ವವಿದ್ಯಾನಿಲಯದಿಂದ ರೂ.23,000/-ಗಳನ್ನು ಭರಿಸಲು ಶಕ್ತವಾಗಿಲ್ಲವೆಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ ಶಿಷ್ಯವೇತನವನ್ನು ಸಂಶೋಧನಾ ವಿದ್ಯಾರ್ಥಿಗಳಿಗೆ ನೀಡುವ ಸಂಬಂಧವಾಗಿ ಶ್ರೀ ಮಹೇಶ್, ಮಾಜಿ ಶಾಸಕರು ಹಾಗೂ ಶ್ರೀ ಹರ್ಷವರ್ಧನ್, ಶಾಸಕರುಗಳು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಆಗ ಇದ್ದಂತಹ ಕುಲಪತಿಗಳು ಹಾಗೂ ವಿದ್ಯಾರ್ಥಿಗಳು ಮತ್ತು ಮುಖಂಡರುಗಳ ಸಮ್ಮುಖದಲ್ಲಿ ಚರ್ಚಿಸಿ, ಸರ್ಕಾರದಿಂದ ನಾವು ಅನುದಾನವನ್ನು ಬಿಡುಗಡೆ ಮಾಡಿಸಿಕೊಡುವುದಾಗಿ ತಿಳಿಸಿ, ವಿಶ್ವವಿದ್ಯಾನಿಲಯದಿಂದ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ಬಿಡುಗಡೆ ಮಾಡುವಂತೆ ತಿಳಿಸಿದ್ದರು. ತದನಂತರ ಒಂದು ಸಮಿತಿಯನ್ನು ರಚಿಸಿ, ಸಿಂಡಿಕೇಟ್ ಸಭೆಯಲ್ಲಿ ಶಿಷ್ಯವೇತನವನ್ನು ರೂ.23,000/- ಹಾಗೂ ರೂ.26,000/-ಗಳ ಶಿಷ್ಯವೇತನವನ್ನು ಹೆಚ್ಚಿಸಲು ತೀರ್ಮಾನಿಸಲಾಯಿತು. ಮೊದಲ ಬಾರಿ ಎಸ್‌ಸಿಎಸ್‌ಪಿ/ಟಿಎಸ್‌ಪಿ ವಿದ್ಯಾರ್ಥಿ ವೇತನವು ವಿಶ್ವವಿದ್ಯಾನಿಲಯಗಳಿಗೆ ಜಾರಿಗೆ ಬಂದಿದ್ದು 2022-23ನೇ ಸಾಲಿಗೆ ನಾವು ಒಬ್ಬ ವಿದ್ಯಾರ್ಥಿಗೆ ರೂ.10,000/-ಗಳನ್ನು ಕೊಡುವುದಾದರೆ ನಮಗೆ ಬೇಕಾಗಿರುವುದು ವರ್ಷಕ್ಕೆ ಒಟ್ಟು ರೂ. 3.00 ಕೋಟಿಗಳು ಬೇಕಾಗುತ್ತದೆ. ನಮ್ಮಲ್ಲಿರುವ ಒಟ್ಟು ಸಂಶೋಧನಾ ವಿದ್ಯಾರ್ಥಿಗಳ ಸಂಖ್ಯೆ 257. ಎಲ್ಲಾ ಮುಖಂಡರುಗಳು ಹಾಗೂ ಸಂಶೋಧನಾ ವಿದ್ಯಾರ್ಥಿಗಳು ಮನವಿ ಸಲ್ಲಿಸಿರುವುದರ ಮೇರೆಗೆ ಮುಂಗಡವಾಗಿ ಶಿಷ್ಯವೇತನವನ್ನು ನೀಡಲು ತಿಳಿಸಿ, ಸರ್ಕಾರದಿಂದ ಅನುದಾನವು ಬಿಡುಗಡೆಯಾದ ನಂತರ ಮರುಭರಿಕೆ ಮಾಡಿಕೊಳ್ಳಬಹುದು ಎಂದು ತಿಳಿಸಿದ್ದರಿಂದ ಶಿಷ್ಯವೇತನವನ್ನು ಸಂಶೋಧನಾ |

ವಿದ್ಯಾರ್ಥಿಗಳಿಗೆ ನೀಡಲಾಯಿತು. ಆದರೆ ಈ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಲಿಖಿತ ಆದೇಶವಿರುವುದಿಲ್ಲ ಎಂದು ತಿಳಿಸಿದರು.

2022-23ನೇ ಸರ್ಕಾರದಿಂದ ಅನುದಾನವು ಬಿಡುಗಡೆಯಾದ ಸಂದರ್ಭದಲ್ಲಿ ಸಿಂಡಿಕೇಟ್ ಸಭೆ ನಡೆಯುತ್ತಿದ್ದಾಗ ಹೊರಗಡೆ ಸಂಶೋಧನಾ ವಿದ್ಯಾರ್ಥಿಗಳೆಲ್ಲರು ಮುಷ್ಕರ ಹೂಡಿದ್ದರು. ಸರ್ಕಾರದಿಂದ ಎಸ್‌ಸಿಎಸ್‌ಪಿ/ಟಿಎಸ್‌ಪಿ ಶಿಷ್ಯವೇತನವು ಮೊದಲ ಬಾರಿಗೆ ಬಂದಿದ್ದರಿಂದ ವಿಶ್ವವಿದ್ಯಾನಿಲಯದಿಂದ ಮುಂಗಡವಾಗಿ ಶಿಷ್ಯವೇತನವನ್ನು ನೀಡಿದ್ದರೂ ಸಹ ಇದೊಂದು ಬಾರಿ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಬಂದಂತಹ ಅನುದಾನವನ್ನು ನೀಡಲು ತೀರ್ಮಾನಿಸಿ ನೀಡಲಾಯಿತು. ಶಿಷ್ಯವೇತನವನ್ನು ನೀಡುವ ಸಂದರ್ಭದಲ್ಲಿ ಮುಂದೆಯೂ ಸರ್ಕಾರದಿಂದ ಅನುದಾನವು ಬಿಡುಗಡೆಯಾಗುವ ನಿರೀಕ್ಷೆಯಿಂದ ಹಾಗೂ ಪ್ರತಿ ವರ್ಷ 20 ಮಂದಿ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು 2021-22ನೇ ಸಾಲಿನಲ್ಲಿ ಕೋವಿಡ್ ಸಾಂಕ್ರಾಮಿಕ ಪಿಡುಗು ಬಂದಿದ್ದರಿಂದ ಆ ಒಂದು ಸಾಲಿನಲ್ಲಿ 271 ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ನೀಡಿದ್ದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆ ಹೆಚ್ಚಾದ್ದರಿಂದ ಮುಂಗಡವಾಗಿ ನೀಡುವ ಶಿಷ್ಯವೇತನವನ್ನು ಸರ್ಕಾರದಿಂದ ಬಿಡುಗಡೆಯಾದ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯವು ಮರುಭರಿಕೆ ಮಾಡಿಕೊಳ್ಳುವುದು ಎಂದು ಮುಚ್ಚಳಿಕೆಯನ್ನು ಬರೆಸಿಕೊಂಡು ನೀಡಿರುವುದಾಗಿ ತಿಳಿಸಿದರು.

ಮುಂದುವರೆದು, ಸರ್ಕಾರದಿಂದ ಬಂದಂತಹ ಶಿಷ್ಯವೇತನದ ಅನುದಾನವನ್ನು ಮರುಭರಿಕೆ ಮಾಡಿಕೊಳ್ಳುತ್ತಾರೆಂದು ಸಂಶೋಧನಾ ವಿದ್ಯಾರ್ಥಿಗಳು ಹಲವು ಬಾರಿ ಮನವಿಯನ್ನು ಸಲ್ಲಿಸಿರುತ್ತಾರೆ. ನೀವೇನಾದರೂ ಶಿಷ್ಯವೇತನವನ್ನು ನೀಡದಿದ್ದಲ್ಲಿ ಸರ್ಕಾರದ ಮಟ್ಟದಲ್ಲಿ ಹೋರಾಡುತ್ತೇವೆ ಎಂದು ತಿಳಿಸಿರುತ್ತಾರೆ. ಆದರೆ ವಿಶ್ವವಿದ್ಯಾನಿಲಯದ ಆರ್ಥಿಕ ಪರಿಸ್ಥಿತಿ ಅಷ್ಟೊಂದು ಸರಿಯಾಗಿಲ್ಲದ ಕಾರಣ ಅದರಲ್ಲೂ 20 ಸಂಶೋಧನಾ ವಿದ್ಯಾರ್ಥಿಗಳಿಗಾಗಿದ್ದರೆ ಶಿಷ್ಯವೇತನವನ್ನು ನೀಡಬಹುದಿತ್ತು, ಆದರೆ ಸಂಶೋಧನಾ ವಿದ್ಯಾರ್ಥಿಗಳು ದೊಡ್ಡಮಟ್ಟದಲ್ಲಿ ಹೆಚ್ಚಿದ್ದಾರೆ. ಒಟ್ಟು 600 ವಿದ್ಯಾರ್ಥಿಗಳು ಶಿಷ್ಯವೇತನವನ್ನು ಪಡೆಯುತ್ತಿದ್ದಾರೆ. ಓಬಿಸಿ – 43, ಎಸ್‌ಸಿ ಎಸ್‌ಟಿ – 245 ಸಂಶೋಧನಾ ವಿದ್ಯಾರ್ಥಿಗಳಿದ್ದಾರೆ. ಅದರಲ್ಲೂ ಪ್ರತಿವರ್ಷ ಹೆಚ್ಚಾಗುತ್ತ ಹೋಗುತ್ತಿರುತ್ತದೆ. ಜೊತೆಗೆ 300ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಯುಜಿಸಿಯ ವಿದ್ಯಾರ್ಥಿ ವೇತನ, ಐಸಿಎಂಆರ್, ಐಸಿಆರ್ ವಿದ್ಯಾರ್ಥಿವೇತನವನ್ನು ಪಡೆಯುತ್ತಿದ್ದಾರೆ. ನಮಗೆ ಶಿಷ್ಯವೇತನಕ್ಕಾಗಿ ಬೇಕಾಗಿರುವ ಒಟ್ಟು ಮೊತ್ತ ರೂ.8.00 ಕೋಟಿಗಳಷ್ಟು. ನಮಗೆ ಬೇಕಾಗಿರುವುದು ಒಟ್ಟು ರೂ.3.6 ಕೋಟಿ ಆದರೆ ಸರ್ಕಾರದಿಂದ ಬಿಡುಗಡೆಯಾಗಿರುವ ಮೊತ್ತ ರೂ.2.75 ಕೋಟಿ. ಎಲ್ಲಾ ಸದಸ್ಯರುಗಳು ಮಾತಾಡಿರುವುದು ವಿದ್ಯಾರ್ಥಿಗಳ ಒಳಿತಿಗಾಗಿಯೇ ಹಾಗೂ ವಿಶ್ವವಿದ್ಯಾನಿಲಯವು ಇರುವುದು ವಿದ್ಯಾರ್ಥಿಗಳಿಗಾಗಿಯೇ. ಜೊತೆಗೆ ಶಿಷ್ಯವೇತನಕ್ಕೆ ಸಂಬಂಧಿಸಿದಂತೆ ಒಂದು ಸಮಿತಿಯನ್ನು ರಚಿಸುವಂತೆ ತೀರ್ಮಾನಿಸಲಾಗಿದೆ. ಆದರೆ ಓಬಿಸಿ ವಿದ್ಯಾರ್ಥಿಗಳಿಗೆ ಹಾಗೂ ಎಸ್‌ಸಿ ಎಸ್‌ಟಿ ವಿದ್ಯಾರ್ಥಿಗಳಿಗೆ ಸಮಾನವಾಗಿ ಶಿಷ್ಯವೇತನವನ್ನು ನೀಡಬೇಕು ಎಂಬುದು ನಿಮ್ಮಗಳ ಅಭಿಮತ. ಆದರೆ ವಿಶ್ವವಿದ್ಯಾನಿಲಯದ ಸದ್ಯದ ಆರ್ಥಿಕ ಪರಿಸ್ಥಿತಿ ಸರಿಯಿಲ್ಲ ಎಂಬುದನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಶಿಷ್ಯವೇತನಕ್ಕಾಗಿ ಸರ್ಕಾರದಿಂದ ಬಂದಂತಹ ಅನುದಾನವನ್ನು ಸಂಶೋಧಕರುಗಳಿಗೆ ನೀಡಿದಲ್ಲಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆಯಾಗಲಿದೆ. ಈ ಪ್ರಕ್ರಿಯೆಯು ಒಂದು ವರ್ಷಕ್ಕೆ ಸೀಮಿತವಾಗಿರುವುದಿಲ್ಲ. ನಿರಂತರವಾಗಿ ಐದು ವರ್ಷಗಳ ಕಾಲ ಶಿಷ್ಯವೇತನವನ್ನು ನೀಡಬೇಕಾಗುತ್ತದೆ ಎಂದು ತಿಳಿಸಿದರು. ಆದ್ದರಿಂದ ಮುಂದೆಯಾದರೂ ಇದಕ್ಕೆ ಒಂದು ಪರಿಹಾರವನ್ನು ಕಂಡುಕೊಳ್ಳಬೇಕಾದ್ದರಿಂದ ಒಂದು ಸಮಿತಿಯನ್ನು ರಚಿಸಿ ವರದಿಯ ಆಧಾರದ ಮೇಲೆ ಕ್ರಮ ಕೈಗೊಳ್ಳುವುದು ಸರಿಯಾದ ಕ್ರಮವೆಂದು ತಿಳಿಸಿದರು. ಜೊತೆಗೆ ತಾವೆಲ್ಲರೂ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆಯಾಗದಂತೆ ಹಾಗೂ ವಿಶ್ವವಿದ್ಯಾನಿಲಯದ ಘನತೆಯನ್ನು ಎತ್ತಿಹಿಡಿಯುವಲ್ಲಿ ಹಾಗೂ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿ ಇವೆಲ್ಲವನ್ನೂ ಪರಿಗಣನೆಗೆ ತೆಗೆದುಕೊಂಡು ಸಮಿತಿಯಲ್ಲಿ

| | |
|---|---|
| | ಚರ್ಚಿಸಿ ಒಂದು ನಿರ್ಣಯಕ್ಕೆ ಬರುವುದು ಒಳಿತೆಂದು ತಿಳಿಸಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ ಯಾವುದೇ ಸರ್ಕಾರವಾಗಲಿ ಹಣಕಾಸಿನ ವಿಚಾರ ಬಂದಾಗ ಸರ್ಕಾರದ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ತೀರ್ಮಾನ ತೆಗೆದುಕೊಳ್ಳುತ್ತದೆ. ಹಾಗೆಯೇ ವಿಶ್ವವಿದ್ಯಾನಿಲಯದ ಆರ್ಥಿಕ ಪರಿಸ್ಥಿತಿಯೂ ಅಷ್ಟಾಗಿ ಸರಿಯಿಲ್ಲದ ಕಾರಣ ಶಿಷ್ಯವೇತನವನ್ನು ನೀಡಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದರು.<br><br>ಡಾ. ಬಸವರಾಜು ಸಿ. ಅವರು ಮಾತನಾಡಿ ಹಣಕಾಸು ಅಧಿಕಾರಿಗಳಿಗೆ ಹಿಂದುಳಿದ ವಿದ್ಯಾರ್ಥಿಗಳಿಗೂ ಶಿಷ್ಯವೇತನವನ್ನು ಸಮಾನವಾಗಿ ನೀಡಬೇಕಾಗಿರುವುದರಿಂದ ಯಾವ ಸಂಪನ್ಮೂಲದಿಂದ ಶಿಷ್ಯವೇತನವನ್ನು ನೀಡಬಹುದು ಎಂಬುದರ ಬಗ್ಗೆ ತಿಳಿಸಬೇಕಾಗಿ ಕೇಳಿದರು.<br><br>ಶ್ರೀ ನಾಗರಾಜು ಸಿ. ಅವರು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ನಡೆಯುವಂತಹ ಕಾರ್ಯಕ್ರಮಗಳಿಗೆ ಲಕ್ಷಾಂತರ ಕೋಟ್ಯಾಂತರ ರೂಪಾಯಿಗಳನ್ನು ವ್ಯಯಿಸುತ್ತೀರಿ, ಆದರೆ ಪಿಎಚ್.ಡಿ ಮಾಡುತ್ತಿರುವಂತಹ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ನೀಡಲಿಕ್ಕೆ ತೊಂದರೆಯಾಗುತ್ತಿದೆ ಎಂದು ಹೇಳುತ್ತಿರುವುದು ವಿಪರ್ಯಾಸದ ಸಂಗತಿ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಸಮಿತಿಯಲ್ಲಿ ಉಪ ಹಣಕಾಸು ಅಧಿಕಾರಿಗಳು, ಎಸ್‌ಸಿ ಎಸ್‌ಟಿ ಘಟಕದ ಉಪಕುಲಸಚಿವರು, ಓಬಿಸಿ ಘಟಕದ ಸಂಯೋಜಕರು ಹಾಗೂ ಸಿಂಡಿಕೇಟ್ ಸದಸ್ಯರುಗಳಾದ ಪ್ರೊ. ಶಬ್ಬೀರ್ ಮೊಹಮ್ಮದ್ ಮುಸ್ತಾಫಾ – ಅಧ್ಯಕ್ಷರು, ಶ್ರೀ ಗೋಕುಲ್‌ಗೋವರ್ಧನ್, ಶ್ರೀ ನಾಗರಾಜು ಸಿ., ಡಾ. ಬಸವರಾಜು ಸಿ., ಶ್ರೀ ನಟರಾಜು ಹೆಚ್.ಎಸ್., ಸದಸ್ಯರುಗಳನ್ನೊಳಗೊಂಡ ಸಮಿತಿಯನ್ನು ರಚಿಸಿ, ಸಮಿತಿಯಲ್ಲಿ ಶಿಷ್ಯವೇತನವನ್ನು ನೀಡುವುದರ ಬಗ್ಗೆ ರೂಪುರೇಷೆಗಳನ್ನು ರಚಿಸಲು ಹಾಗೂ ಸಮಿತಿಯ ವರದಿಯ ಆಧಾರದ ಮೇಲೆ ಶಿಷ್ಯವೇತನವನ್ನು ಹಂಚಿಕೆ ಮಾಡುವುದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬಹುದೆಂದು ತಿಳಿಸಿದರು. |
| **ತೀರ್ಮಾನ** | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧಕರಿಗೆ ಪಿಎಚ್.ಡಿ. ಶಿಷ್ಯವೇತನಕ್ಕಾಗಿ 2023-24ನೇ ಸಾಲಿಗೆ ಸರ್ಕಾರದಿಂದ ಬಿಡುಗಡೆಯಾಗಿರುವ SCSP/TSP ಅನುದಾನ ರೂ.2.75 ಕೋಟಿಗಳ ಸದ್ಬಳಕೆ ಕುರಿತು ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ ವಿಶ್ವವಿದ್ಯಾನಿಲಯದ ಸಂಶೋಧನಾ ವಿದ್ಯಾರ್ಥಿಗಳ ಶಿಷ್ಯವೇತನವನ್ನು ನಿಗಧಿಗೊಳಿಸುವ ಸಂಬಂಧ ಈ ಕೆಳಕಂಡ ಸಿಂಡಿಕೇಟ್ ಸದಸ್ಯರನ್ನು ಹಾಗೂ ವಿಶ್ವವಿದ್ಯಾನಿಲಯದ ಅಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ರಚಿಸಲು ಹಾಗೂ ಸದರಿ ಸಮಿತಿಯು 2-3 ದಿನಗಳೊಳಗೆ ವಿಶ್ವವಿದ್ಯಾನಿಲಯಕ್ಕೆ ವರದಿಯನ್ನು ಶೀಘ್ರವಾಗಿ ಸಲ್ಲಿಸುವಂತೆ ಸಭೆಯು ನಿರ್ಣಯಿಸಿತು.<br><br>1. ಪ್ರೊ. ಶಬ್ಬೀರ್ ಮೊಹಮ್ಮದ್ ಮುಸ್ತಾಫಾ, ಸಿಂಡಿಕೇಟ್ ಸದಸ್ಯರು – ಅಧ್ಯಕ್ಷರು<br>2. ಶ್ರೀ ಗೋಕುಲ್ ಗೋವರ್ಧನ್, ಸಿಂಡಿಕೇಟ್ ಸದಸ್ಯರು – ಸದಸ್ಯರು<br>3. ಶ್ರೀ ಮಹದೇಶು, ಸಿಂಡಿಕೇಟ್ ಸದಸ್ಯರು – ಸದಸ್ಯರು<br>4. ಶ್ರೀ ನಾಗರಾಜು ಸಿ., ಸಿಂಡಿಕೇಟ್ ಸದಸ್ಯರು – ಸದಸ್ಯರು<br>5. ಡಾ. ಬಸವರಾಜು ಸಿ., ಸಿಂಡಿಕೇಟ್ ಸದಸ್ಯರು – ಸದಸ್ಯರು<br>6. ಶ್ರೀ ನಟರಾಜು ಹೆಚ್.ಎಸ್., ಸಿಂಡಿಕೇಟ್ ಸದಸ್ಯರು – ಸದಸ್ಯರು<br>7. ಶ್ರೀ ರೇವಣ್ಣ ಐ.ಸಿ., ಉಪ ಹಣಕಾಸು ಅಧಿಕಾರಿಗಳು – ಸದಸ್ಯರು<br>8. ಸಂಯೋಜಕರು, ಹಿಂದುಳಿದ ವರ್ಗಗಳ ಘಟಕ – ಸದಸ್ಯರು<br>9. ಉಪಕುಲಸಚಿವ, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಿಶೇಷ ಘಟಕ – ಸಂಚಾಲಕ |

| | |
|---|---|
| ಸಾಮಾನ್ಯ ಸಭೆ 2024/2.27 | ಡಾ. ಎಸ್. ಲೋಕೇಶ್, ನಿವೃತ್ತ ಸಹ ಪ್ರಾಧ್ಯಾಪಕರು, ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ Provisional Pension ಅನ್ನು ಮಂಜೂರು ಮಾಡುವ ಬಗ್ಗೆ. |
| | ಕುಲಸಚಿವರು ಡಾ. ಎಸ್. ಲೋಕೇಶ್, ನಿವೃತ್ತ ಸಹ ಪ್ರಾಧ್ಯಾಪಕರು ಇವರಿಗೆ Provisional Pension ಅನ್ನು ಮಂಜೂರು ಮಾಡುವ ವಿಷಯವನ್ನು ಸಭೆಗೆ ಮಂಡಿಸಿದರು.<br><br>ಡಾ. ಎಸ್. ಲೋಕೇಶ್ ರವರು ವಿಶ್ವವಿದ್ಯಾನಿಲಯದ ಜೈವಿಕ ತಂತ್ರಜ್ಞಾನ ವಿಭಾಗದಲ್ಲಿ ತಾಂತ್ರಿಕ ಸಹಾಯಕರಾಗಿ ಕೆಲಸ ನಿರ್ವಹಿಸುತ್ತಿದ್ದರು. ಆನಂತರದಲ್ಲಿ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲದ ತೀರ್ಪಿನಂತೆ ಡಾ. ಎಸ್. ಲೋಕೇಶ್ ತಾಂತ್ರಿಕ ಸಹಾಯಕರು ಇವರು ಯುಜಿಸಿ ನಿಯಮಗಳನ್ವಯ ಅಗತ್ಯ ವಿದ್ಯಾರ್ಹತೆ ಹೊಂದಿರುವುದರಿಂದ ಇವರ ಹುದ್ದೆಯನ್ನು ಸಹ ಪೂರ್ವಾನ್ವಯವಾಗಿ ಅನ್ವಯವಾಗುವಂತೆ ತಾಂತ್ರಿಕ ಸಹಾಯಕ ಹುದ್ದೆಯನ್ನು ಅಧ್ಯಾಪಕ ಹುದ್ದೆಗೆ ಉನ್ನತೀಕರಿಸಿಕೊಂಡು ಸಹ ಪ್ರಾಧ್ಯಾಪಕ ಹುದ್ದೆಯನ್ನು ನೀಡಲಾಗಿತ್ತು. ಡಾ. ಎಸ್. ಲೋಕೇಶ್ ಅವರು ದಿನಾಂಕ :31.10.2022ರಂದು ನಿವೃತ್ತಿ ಹೊಂದಿರುತ್ತಾರೆ.<br><br>ನಂತರದಲ್ಲಿ 2016-17ರಲ್ಲಿ ಸಿ.ಎ.ಜಿ ಆಡಿಟ್ ಆದ ಸಂದರ್ಭದಲ್ಲಿ ಅವರಿಗೆ ನೀಡಿರುವ ಬಡ್ತಿ ಕಾನೂನು ಬಾಹಿರ, ಹಾಗೂ ಇಲ್ಲಿಯವರೆಗೂ ನೀಡಿರುವ ಹೆಚ್ಚುವರಿ ವೇತನವನ್ನು ವಸೂಲಾತಿ ಮಾಡಲು ತಿಳಸಿದೆ. ಕಳೆದ ಐದು ವರ್ಷಗಳಿಂದ ವಿಧಾನ ಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯಲ್ಲಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದೀರ್ಘವಾಗಿ ಚರ್ಚೆಯಾಗಿದೆ.<br><br>ದಿನಾಂಕ : 12.03.2024 ರಂದು ನಡೆದ ವಿಧಾನ ಮಂಡಲದ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿ ಸದರಿ ವಿಷಯದ ಬಗ್ಗೆ ಸಕಾರಾತ್ಮಕವಾದ ಅನುಮೋದನೆ ದೊರಕುವುದರಲ್ಲಿದೆ. ಸಮಿತಿ ಸಭೆಯ ನಡಾವಳಿಯು ಇನ್ನೂ ಬಂದಿರುವುದಿಲ್ಲ. ಆದ್ದರಿಂದ ವಿಧಾನ ಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ತೀರ್ಮಾನವನ್ನು ಸಿಂಡಿಕೇಟ್ ಸಮಿತಿಯು ಸಹ ಪೂರಕವಾಗಿ ಒಪ್ಪಿದಲ್ಲಿ ಅದರಂತೆ ಕ್ರಮವಹಿಸಬಹುದೆಂದು ತಿಳಸಿದರು.<br><br>ಜೊತೆಗೆ ಕ್ಷೇತ್ರ ಸಹಾಯಕ ಮತ್ತು ಆಂಟಿಕ್ವಿಟಿ ಹುದ್ದೆಗಳಿಂದ ಬಡ್ತಿ ಹೊಂದಿದ್ದ ಸಹ /ಸಹಾಯಕ ಪ್ರಾಧ್ಯಾಪಕರುಗಳಾಗಿ ನಿವೃತ್ತಿ ಹೊಂದಿದವರಿಗೆ ಹಾಗೂ ನಿವೃತ್ತಿ ಹೊಂದಲಿರುವ ಸಹ/ಸಹಾಯಕ ಪ್ರಾಧ್ಯಾಪಕರುಗಳಿಗೆ ಪಿಂಚಣಿ ಸೌಲಭ್ಯವನ್ನು ಒದಗಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಲು ಅನುಕೂಲವಾಗುವುದೆಂದು ತಿಳಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ವಿಧಾನ ಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ತೀರ್ಮಾನದನ್ವಯ Provisonal Pension ಅನ್ನು ಸಹ ಪ್ರಾಧ್ಯಾಪಕರು/ಸಹಾಯಕ ಪ್ರಾಧ್ಯಾಪಕರುಗಳಿಗೆ ನೀಡಿ ಮುಂದಿನ ಸಿಂಡಿಕೇಟ್ ಸಭೆಗೆ ಅನುಸಮರ್ಥನೆಗಾಗಿ ಮಂಡಿಸಲಾಗುವುದೆಂದು ತಿಳಸಿದರು. |
| ತೀರ್ಮಾನ | ದಿನಾಂಕ : 12.03.2024 ರಂದು ಜರುಗಿದ ವಿಧಾನ ಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯಲ್ಲಿ ಧನಾತ್ಮಕವಾಗಿ ಚರ್ಚಿಸಿ ಈ ಆಕ್ಷೇಪಣೆಗಳನ್ನು ಕೈಬಿಡುವಂತೆ ತೀರ್ಮಾನಿಸಲಾಗಿದೆ. ನಡಾವಳಿಯ ಪ್ರತಿಯನ್ನು ಸ್ವೀಕರಿಸಿದ ತಕ್ಷಣವೇ ಅದರಂತೆ ಡಾ. ಎಸ್. ಲೋಕೇಶ್, ನಿವೃತ್ತ ಸಹ ಪ್ರಾಧ್ಯಾಪಕರು, ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಎಲ್ಲಾ ಪಿಂಚಣಿ ಸೌಲಭ್ಯಗಳನ್ನು ಮಂಜೂರು ಮಾಡಿ ಕ್ರಮವಹಿಸಿ ಸಿಂಡಿಕೇಟ್‌ನ ಅನುಸಮರ್ಥನೆಗೆ ಮಂಡಿಸಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |
| ಸಾಮಾನ್ಯ ಸಭೆ 2024/2.28 | ವಿಶ್ವವಿದ್ಯಾನಿಲಯದ ಸಂಶೋಧನಾ ಸಹಾಯಕ, ಕ್ಷೇತ್ರ ಸಹಾಯಕ ಮತ್ತು ಆಂಟಿಕ್ವಿಟಿ ಅಸಿಸ್ಟೆಂಟ್ ಹುದ್ದೆಗಳನ್ನು ಅಧಿನಿಯಮದನುಸಾರ ಸಹಾಯಕ ಪ್ರಾಧ್ಯಾಪಕ ಹುದ್ದೆಗಳಾಗಿ ಉನ್ನತೀಕರಿಸಿರುವ ಬಗ್ಗೆ. |

| | |
|---|---|
| **ತೀರ್ಮಾನ** | ದಿನಾಂಕ : 12.03.2024 ರಂದು ಜರುಗಿದ ವಿಧಾನ ಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯಲ್ಲಿ ಧನಾತ್ಮಕವಾಗಿ ಚರ್ಚಿಸಿ ಈ ಆಕ್ಷೇಪಣೆಗಳನ್ನು ಕೈಬಿಡುವಂತೆ ತೀರ್ಮಾನಿಸಲಾಗಿದೆ. ನಡಾವಳಿಯ ಪ್ರತಿಯನ್ನು ಸ್ವೀಕರಿಸಿದ ತಕ್ಷಣವೇ ವಿಶ್ವವಿದ್ಯಾನಿಲಯದ ಸಂಶೋಧನಾ ಸಹಾಯಕ, ಕ್ಷೇತ್ರ ಸಹಾಯಕ ಮತ್ತು ಆಂಟಿಕ್ವಿಟಿ ಅಸಿಸ್ಟೆಂಟ್ ಹುದ್ದೆಗಳನ್ನು ಅಧಿನಿಯಮದನುಸಾರ ಸಹಾಯಕ ಪ್ರಾಧ್ಯಾಪಕ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದಂತಹ ಬೋಧಕ ಸಿಬ್ಬಂದಿಗಳಿಗೆ ಎಲ್ಲಾ ಪಿಂಚಣಿ ಸೌಲಭ್ಯಗಳನ್ನು ಮಂಜೂರು ಮಾಡಿ ಕ್ರಮವಹಿಸಿ ಸಿಂಡಿಕೇಟ್‌ನ ಅನುಸಮರ್ಥನೆಗೆ ಮಂಡಿಸಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |

ಇತರೆ ವಿಷಯಗಳು:

1. ಶ್ರೀ. ಗೋಕುಲ್ ಗೋವರ್ಧನ್ ಅವರು ಮಾತನಾಡಿ ಪಿಎಚ್.ಡಿ. ಪ್ರವೇಶಾತಿ ಪರೀಕ್ಷೆ ನಡೆಸುವುದರ ಕುರಿತು ವಿಶ್ವವಿದ್ಯಾನಿಲಯದ ನಿಲುವೇನೆಂದು ಪ್ರಶ್ನಿಸಿದರು.

ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನಿಂದ ಈಗಾಗಲೇ ಸಮಿತಿಯನ್ನು ರಚಿಸಿದ್ದು, ಸಮಿತಿಯ ಅಭಿಪ್ರಾಯದಂತೆ ಅವರೇ ಒಂದು ನಿಯಮವನ್ನು (Regulations) ಸಿದ್ಧಪಡಿಸಿ ಪರೀಕ್ಷೆ ಕೂಡ ಅವರೇ ನಡೆಸುವ ಪ್ರಯತ್ನದಲ್ಲಿದ್ದಾರೆಂದು ತಿಳಿದು ಬಂದಿದೆ. ಇದರ ಕುರಿತು ವಿಶ್ವವಿದ್ಯಾನಿಲಯದಿಂದ ಕೂಡ ಪತ್ರ ನೀಡಿರುತ್ತೇವೆ. ಸಮಿತಿ ತೆಗೆದುಕೊಳ್ಳುವ ತೀರ್ಮಾನದಂತೆ ಮುಂದಿನ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಇತರ ವಿಶ್ವವಿದ್ಯಾನಿಲಯದಲ್ಲಿ ಪಿಎಚ್.ಡಿ. ಪ್ರವೇಶಾತಿ ಪರೀಕ್ಷೆಯನ್ನು ಆಯಾ ವಿಶ್ವವಿದ್ಯಾನಿಲಯದಲ್ಲಿ ಮಾಡಿಕೊಂಡಿರುತ್ತಾರೆ ಮತ್ತು ಸರ್ಕಾರ ಇದರ ಬಗ್ಗೆ ಕ್ರಮವಹಿಸಿಲ್ಲವೇ ಎಂದು ಪ್ರಶ್ನಿಸಿದರು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಖಾಯಂ ಅಧ್ಯಾಪಕರುಗಳು ವಯೋನಿವೃತ್ತಿ ಹೊಂದುತ್ತಿದ್ದು, ಅಧ್ಯಾಪಕರುಗಳ ಸಂಖ್ಯೆ ಕಡಿಮೆಯಾಗುತ್ತಿದೆ, ಹೊಸದಾಗಿ ಸೇರ್ಪಡೆಯಾಗುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರ ಕೊರತೆ ಉಂಟಾಗುತ್ತದೆ ಎಂದು ತಿಳಿಸಿದರು. ತಾತ್ಕಾಲಿಕ ಅತಿಥಿ ಉಪನ್ಯಾಸಕರುಗಳನ್ನು ಮಾರ್ಗದರ್ಶಕರಾಗಿ ನೇಮಕ ಮಾಡಲಾಗುವುದಿಲ್ಲ. ಖಾಯಂ ಅಧ್ಯಾಪಕರುಗಳ ಕರ್ತವ್ಯದ ಅವಧಿ ಮುಗಿಯುತ್ತಿದ್ದಾಗ ಹೊಸ ವಿದ್ಯಾರ್ಥಿಗಳು ಪಿಎಚ್.ಡಿ.ಗೆ ಸೇರ್ಪಡೆಗೊಳ್ಳಲು ಸಾಧ್ಯವಾಗುವುದಿಲ್ಲ. ಸದರಿ ವಿಷಯವನ್ನು ಸವಿವರವಾಗಿ ಮತ್ತು ಅದರ ಸಾಧಕಬಾಧಕಗಳ ಕುರಿತು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಬೇಕಾಗಿ ಮನವಿ ಸಲ್ಲಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಸಭೆಯಲ್ಲಿ ಸದರಿ ವಿಷಯದ ಬಗ್ಗೆ ಪ್ರಸ್ತಾಪಿಸಿರುವುದಾಗಿ ತಿಳಿಸಿದರು. ಸದರಿ ವಿಷಯದ ಬಗೆಗೆ ಈಗಾಗಲೇ ಒಂದು ಸಮಿತಿಯನ್ನು ರಚಿಸಲಾಗಿದೆ. ಸಮಿತಿಯ ವರದಿಯಂತೆ ಮುಂದೆ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು. ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನವರು ವಿಶ್ವವಿದ್ಯಾನಿಲಯದಲ್ಲಿ ನಡೆಯುವಂತಹ ಪಿಎಚ್.ಡಿ. ಪ್ರವೇಶಾತಿ ಪರೀಕ್ಷೆಯಲ್ಲಿ ತಮ್ಮವರಿಗೆ ಅವಕಾಶ ನೀಡುತ್ತಿದ್ದೀರಿ. ಅದರಲ್ಲಿ ಸಂವಿಧಾನ ಅನುಚ್ಛೇದ 371ಜೆ ಅನ್ವಯ ಸ್ಥಳೀಯ ಪ್ರದೇಶದ ಅಭ್ಯರ್ಥಿಗಳಿಗೆ ಅವಕಾಶ ನೀಡುತ್ತಿಲ್ಲವೆಂದು ತಿಳಿಸಲಾಗಿದ್ದು, ಆದ್ದರಿಂದ ಉನ್ನತ ಶಿಕ್ಷಣ ಮಂಡಳಿ/ಇಲಾಖೆ ವತಿಯಿಂದಲೇ ಏಕರೂಪವಾಗಿ ಪಿಎಚ್.ಡಿ. ಪ್ರವೇಶಾತಿ ಪರೀಕ್ಷೆಯನ್ನು ನಡೆಸುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ ವಿಶ್ವವಿದ್ಯಾನಿಲಯವು ಸಮಿತಿಯ ವರದಿಯೇನಾದರೂ ಆಯಾ ವಿಶ್ವವಿದ್ಯಾನಿಲಯಗಳೇ ಪಿಎಚ್.ಡಿ. ಪರೀಕ್ಷೆ ನಡೆಸಲಿ ಎಂದರೆ, ಪ್ರವೇಶಾತಿ ಪರೀಕ್ಷೆಯನ್ನು ನಡೆಸುವುದಾಗಿ ತಿಳಿಸಿದರು.

ಮುಂದುವರೆದು, ವಿಶ್ವವಿದ್ಯಾನಿಲಯವು ನಡೆಸುವಂತಹ ಎಲ್ಲಾ ಪರೀಕ್ಷೆಗಳನ್ನು ಉನ್ನತ ಶಿಕ್ಷಣ ಮಂಡಳಿ/ಇಲಾಖೆಯವರೇ ನಡೆಸಿದರೆ ವಿಶ್ವವಿದ್ಯಾನಿಲಯದ ಪಾತ್ರವೇನು? ಎಂಬುದು ಪ್ರಶ್ನೆಯಾಗಿದೆ ಎಂದು ತಿಳಿಸಿದರು.

2. ಶ್ರೀ ನಟರಾಜು ಹೆಚ್.ಎಸ್. ಅವರು ಮಾತನಾಡಿ ದೈಹಿಕ ಶಿಕ್ಷಣ ವಿಭಾಗದಲ್ಲಿ ತಾತ್ಕಾಲಿಕ ಅಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರನ್ನು ಏಕಾಏಕಿ ತೆಗೆದುಹಾಕಿರುತ್ತಾರೆ ಮತ್ತು ಸ್ನಾತಕೋತ್ತರ ಅಧ್ಯಯನ ವಿಭಾಗವಾಗಿದ್ದ ಮಂಡ್ಯ ವಿಶ್ವವಿದ್ಯಾನಿಲಯದಲ್ಲಿ ವಿಶೇಷ ಚೇತನ ಅಧ್ಯಾಪಕರು ಬಹಳ ವರ್ಷಗಳಿಂದ ಅತಿಥಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಅವರಿಗೆ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕರಾಗಿ ಮುಂದುವರೆಸುವುದಕ್ಕೆ ಅವಕಾಶ ಮಾಡಿಕೊಡಬೇಕಾಗಿ ಕೋರಿದರು.

ಮಾನ್ಯ ಕುಲಪತಿಗಳು ಮಾತನಾಡಿ ದೈಹಿಕ ಶಿಕ್ಷಣ ವಿಭಾಗದ ಸಮಸ್ಯೆಯನ್ನು ನಿವಾರಿಸುವುದಾಗಿ ಹಾಗೂ ವಿಶೇಷ ಚೇತನ ಅತಿಥಿ ಉಪನ್ಯಾಸಕರಿಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯಭಾರವಿದ್ದಲ್ಲಿ ನೀಡುವುದಾಗಿ ತಿಳಿಸಿದರು. ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವ ಸಂದರ್ಭದಲ್ಲಿ ಅವರ ವಿದ್ಯಾರ್ಹತೆ ಹಾಗೂ ಸಂದರ್ಶನದ ಮೂಲಕ ನೇಮಕ ಮಾಡಿಕೊಳ್ಳುವುದಾಗಿ ಸಭೆಯ ಗಮನಕ್ಕೆ ತಂದರು.

ಸಿಂಡಿಕೇಟ್‌ನ ಎಲ್ಲಾ ಸದಸ್ಯರುಗಳು ಯಾವುದೇ ಒತ್ತಡಕ್ಕೆ ಮಣಿಯದೆ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡುವ ಕಾರ್ಯವನ್ನು ಹಮ್ಮಿಕೊಂಡಿರುವ ಕುಲಪತಿಗಳ ಮಾತಿಗೆ ಒಪ್ಪಿಗೆ ಸೂಚಿಸಿದರು.

ಡಾ. ಬಸವರಾಜು ಸಿ. ಅವರು ಮಾತನಾಡಿ ಕೆಲವು ಅತಿಥಿ ಉಪನ್ಯಾಸಕರುಗಳು ವಿದ್ಯಾರ್ಹತೆಯಿಲ್ಲದವರು ಹತ್ತು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದೇವೆ ಎಂದು ತಿಳಿಸಿರುತ್ತಾರೆ. ಇಂತಹ ಅತಿಥಿ ಉಪನ್ಯಾಸಕರುಗಳನ್ನು ಆಯ್ಕೆ ಮಾಡಲು ಯಾವ ರೀತಿಯ ಮಾನದಂಡವನ್ನು ಅನುಸರಿಸುತ್ತಿದ್ದೀರಿ ಎಂದು ಕೇಳಿದರು.

ಮಾನ್ಯ ಕುಲಪತಿಯವರು ಮಾತನಾಡಿ ಕೆಲವು ವಿಷಯಗಳಿಗೆ qualified teachersಗಳು ಇಲ್ಲದಿದ್ದ ಕಡೆ ಮಾತ್ರ ವಿದ್ಯಾರ್ಹತೆ ಇಲ್ಲದವರನ್ನು ಉದಾಹರಣೆಗೆ ಪಿಎಚ್.ಡಿ. ಮಾಡದವರು, NET, K-SET ಆಗದವರನ್ನು ನೇಮಕಾತಿ ಮಾಡಿಕೊಂಡಿರುತ್ತಾರೆ ಎಂದು ತಿಳಿಸಿದರು.

3. ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ನ್ಯಾಕ್ ವಿಚಾರವಾಗಿ ಎಲ್ಲೆಲ್ಲಿ ಅಂಕ ಕಡಿಮೆಯಾಗಿದೆ ಎಂಬುದನ್ನು ಗಮನಿಸಿ ದಯಮಾಡಿ ಅದರ ಬಗ್ಗೆ ಕ್ರಮ ಕೈಗೊಂಡು ಈ ಬಾರಿ ನ್ಯಾಕ್‌ನಿಂದ ಹೆಚ್ಚು ಅಂಕ ಪಡೆಯುವುದಕ್ಕೆ ಪ್ರಯತ್ನಿಸಬೇಕಾಗಿ ಮಾನ್ಯ ಕುಲಪತಿಗಳಲ್ಲಿ ಮನವಿ ಮಾಡಿಕೊಂಡರು.

ಮಾನ್ಯ ಕುಲಪತಿಗಳು ಕಳೆದ ಬಾರಿ ಎಲ್ಲೆಲ್ಲಿ ಅಂಕ ಕಡಿಮೆಯಾಗಿದೆಯೋ ಅಂತಹ ಕಡೆ ಸರಿಪಡಿಸುವುದಕ್ಕೆ ಕ್ರಮಕೈಗೊಂಡಿರುತ್ತೇನೆ. ಹಾಗೂ ಖಾಯಂ ಅಧ್ಯಾಪಕರುಗಳ ನೇಮಕಾತಿಯಾದಲ್ಲಿ ಶೇ. 50 ರಷ್ಟು ಅಂಕ ಬರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

ಡಾ. ಬಸವರಾಜು ಸಿ. ಅವರು ಮಾತನಾಡಿ ಖಾಯಂ ಅಧ್ಯಾಪಕರುಗಳನ್ನು ನೇಮಕಾತಿ ಮಾಡಿಕೊಂಡಲ್ಲಿ ನ್ಯಾಕ್‌ನಿಂದ ಅಂಕಗಳಿಸಲು ಸಾಧ್ಯವೆಂದು ತಿಳಿಸಿದರು.

4. ಶ್ರೀ ನಟರಾಜು ಹೆಚ್.ಎಸ್. ಅವರು ಮಾತನಾಡಿ 2003ರಲ್ಲಿ ಬ್ಯಾಕ್‌ಲಾಗ್ ಹುದ್ದೆಗಳು ಭರ್ತಿಯಾಗಿದ್ದು, 76 ಹುದ್ದೆಗಳು ಖಾಲಿ ಇರುವುದಾಗಿ ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಗಳು ನೇಮಕಾತಿಗಾಗಿ ನಾವು ಈಗಾಗಲೇ ಸರ್ಕಾರಕ್ಕೆ ಪತ್ರ ಬರೆಯಲಾಗಿದ್ದು, ಸರ್ಕಾರ ಅನುಮತಿ ನೀಡಿದರೆ ಶೀಘ್ರ ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

5. ಶ್ರೀ ನಾಗರಾಜು ಸಿ. ಅವರು ಮಾತನಾಡಿ ಡಾ. ಎಸ್. ಗೋವಿಂದರಾಜ್ ಹಾಗೂ ಡಾ. ದಿವಾಕರ್ ಸಿ. ಅವರು ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ಅವರಿಗೂ ಸಹ ಗೈಡ್‌ಶಿಪ್ ನೀಡಬೇಕಾಗಿ ಮನವಿ ಮಾಡಿಕೊಂಡರು.

ಮಾನ್ಯ ಕುಲಪತಿಗಳು ಡಾ. ಎಸ್. ಗೋವಿಂದರಾಜ್ ಹಾಗೂ ಡಾ. ದಿವಾಕರ್ ಸಿ. ಅವರುಗಳಿಗೆ ಗೈಡ್‌ಶಿಪ್ ನೀಡಲು ಕ್ರಮಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

6. ಶ್ರೀ ಮಹದೇಶು ಅವರು ಮಾತನಾಡಿ ಮುಂದಿನ ಶೈಕ್ಷಣಿಕ ಸಾಲಿನಿಂದ ಮಹಾರಾಜ ಮತ್ತು ಯುವರಾಜ ಕಾಲೇಜುಗಳ ತರಗತಿ ಪ್ರಾರಂಭವಾಗುವ ದಿನದಿಂದಲೇ ಅತಿಥಿ ಉಪನ್ಯಾಸಕರುಗಳಿಗೆ ಆದೇಶದ ಪ್ರತಿ ಲಭಿಸುವಂತೆ ಕ್ರಮಕೈಗೊಳ್ಳಿ, ಏಕೆಂದರೆ ವೇತನವನ್ನು ನಂಬಿಕೊಂಡಿರುವ ಅಧ್ಯಾಪಕರುಗಳಿಗೆ ತಡವಾಗಿ ವೇತನ ಪಾವತಿಯಾದರೆ ತೊಂದರೆಯಾಗುತ್ತದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಮಹಾರಾಜ ಮತ್ತು ಯುವರಾಜ ಕಾಲೇಜುಗಳು ಕೆಲವೊಂದು ನ್ಯೂನತೆಗಳಿಂದ ಕೂಡಿದೆ ಅದನ್ನು ಸರಿಪಡಿಸುವ ನಿಟ್ಟಿನಲ್ಲಿ ಕ್ರಮಕೈಗೊಂಡಿರುತ್ತೇನೆ ಹಾಗೂ ಅತಿಥಿ ಉಪನ್ಯಾಸಕರುಗಳಿಗೆ ಶೈಕ್ಷಣಿಕ ಸಾಲಿನಿಂದ ಆದೇಶದ ಪ್ರತಿ ಲಭಿಸುವಂತೆ ಕ್ರಮವಹಿಸುವುದಾಗಿ ತಿಳಿಸಿದರು.

7. ಶ್ರೀ ಮಹದೇಶು ಅವರು ಮಾತನಾಡಿ ಇಂಜಿನಿಯರಿಂಗ್ ಕಾಲೇಜಿನ ಆಡಳಿತ ಮಂಡಳಿಯ ಸಮಿತಿಯ ಸದಸ್ಯರಾಗಿ ಪ್ರೊ. ಹೇಮಂತ್‌ಕುಮಾರ್ ಹಾಗೂ ಡಾ. ಚೇತನ್ ಹಿಂದಿನ ಕುಲಪತಿಗಳ ವಿಶೇಷಾಧಿಕಾರಿಯವರನ್ನು ಬದಲಾವಣೆ ಮಾಡಿ ಎಂದು ಕೋರಿದರು.

8. ಮಾನ್ಯ ಕುಲಪತಿಗಳು ಮಾತನಾಡಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ವರ್ಷಕ್ಕೆ ಒಂದು ಸಭೆ ನಡೆಯುತ್ತದೆ ಪ್ರೊ. ಹೇಮಂತ್‌ಕುಮಾರ್‌ರವರು ಕುಲಪತಿಗಳಾಗಿದ್ದ ಅವಧಿಯಲ್ಲಿ ಇಂಜಿನಿಯರಿಂಗ್ ಕಾಲೇಜು ಪ್ರಾರಂಭವಾಗಿದ್ದು, ಸಮಿತಿಯಲ್ಲಿ ಇಂಜಿನಿಯರಿಂಗ್ ಕಾಲೇಜಿಗೆ ಸಂಬಂಧಿಸಿದಂತೆ ಹಲವು ವಿಷಯಗಳನ್ನು ಪ್ರಸ್ತಾಪಿಸಲು, ಅವರ ಉದ್ದೇಶ, ಯೋಜನೆಗಳ ಬಗ್ಗೆ ಉತ್ತರಿಸುವ ಸಲುವಾಗಿ ಸೇರ್ಪಡೆಗೊಳಿಸಲಾಗಿತ್ತು ಹಾಗೂ ಅಲ್ಲಿ ಖಾಯಂ ಪ್ರಾಧ್ಯಾಪಕರು ಇಲ್ಲದಿರುವುದರಿಂದ ಅತಿಥಿ ಉಪನ್ಯಾಸಕರುಗಳೇ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಆದ್ದರಿಂದ ಅವರನ್ನು ಬದಲಾವಣೆ ಮಾಡಿರುವುದಿಲ್ಲ, ಆಡಳಿತ ಮಂಡಳಿಯ ಸದಸ್ಯರನ್ನು ಆಡಳಿತ ಮಂಡಳಿಯಲ್ಲಿ ಬದಲಾವಣೆ ಮಾಡುವ ಅವಕಾಶವಿದೆ ಎಂದು ಸಭೆಯ ಗಮನಕ್ಕೆ ತಂದರು.

ಶ್ರೀ ಮಹದೇಶು ಅವರು ಮಾತನಾಡಿ ಇಂಜಿನಿಯರಿಂಗ್ ಕಾಲೇಜಿನ ಆಡಳಿತ ಮಂಡಳಿಯ ಸದಸ್ಯರುಗಳಾದ ಪ್ರೊ. ಹೇಮಂತ್‌ಕುಮಾರ್ ಹಾಗೂ ಡಾ. ಚೇತನ್ ಅವರುಗಳನ್ನು ಬದಲಾವಣೆ ಮಾಡಿ ನುರಿತ ಅಧ್ಯಾಪಕರನ್ನು ನೇಮಕ ಮಾಡಿ ಎಂದು ಕೋರಿದರು.

ಮಾನ್ಯ ಕುಲಪತಿಯವರು ಮಾತನಾಡಿ ನುರಿತ ತಜ್ಞರನ್ನು ಆಯ್ಕೆ ಮಾಡಿ ಹೊಸ ಸಮಿತಿ ರಚಿಸುವುದಾಗಿ ತಿಳಿಸಿದರು. ಜೊತೆಗೆ ಸಿಂಡಿಕೇಟ್ ಸದಸ್ಯರುಗಳಾದ ತಾವುಗಳು ಶೈಕ್ಷಣಿಕವಾಗಿ ತಮ್ಮ ಆಸ್ಥೆಯನ್ನು ತೋರುತ್ತಿರುವುದು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಅಭಿವೃದ್ಧಿಗೆ ಹೆಚ್ಚಿನ ರೀತಿಯಲ್ಲಿ ಶ್ರಮಿಸಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಅಂತಿಮವಾಗಿ ಕುಲಸಚಿವರು ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕರಿಸಿದ ಅಧ್ಯಕ್ಷರು ಹಾಗೂ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

ಸದಸ್ಯ ಕಾರ್ಯದರ್ಶಿ ಹಾಗೂ ಕುಲಸಚಿವರು

ಅಧ್ಯಕ್ಷರು ಹಾಗೂ ಕುಲಪತಿಗಳು